# ಕೆ. ಎಲ್. ಇ. ವಾರ್ತಾಪತ್ರ

ತ್ರೈಮಾಸಿಕ ಪತ್ರಿಕೆ

# K. L. E. BULLETIN

Quarterly Magazine

Vol.21 | Issue 3 | July-2019




ಕೆಎಲ್‌ಇ ಶತಮಾನೋತ್ಸವದಲ್ಲಿ ಗೌರವಾನ್ವಿತ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರಿಗೆ ರಾಣಿ ಚನ್ನಮ್ಮಳ ಸ್ಮರಣಿಕೆ ನೀಡಿ ಗೌರವಿಸುತ್ತಿರುವ ಕೆಎಲ್‌ಇ ಕುಲಾಧಿಪತಿ ಡಾ. ಪ್ರಭಾಕರ ಕೋರೆಯವರು ಹಾಗೂ ಕುಲಪತಿ ಡಾ. ವಿವೇಕ ಸಾವೋಜಿ.

ಪ್ರಸಾರಾಂಗ

ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ, ಬೆಳಗಾವಿ

KARNATAK LINGAYAT EDUCATION SOCIETY, BELAGAVI



ಬೆಂಗಳೂರಿನ ರಾಜಾಜಿನಗರದಲ್ಲಿ ನೂತನವಾಗಿ ನಿರ್ಮಾಣಗೊಂಡ ಕೆಎಲ್ಇ ದಿ ಬ್ಯಾನಿಯನ್ ಶಾಲೆಯನ್ನು ಉದ್ಘಾಟಿಸುತ್ತಿರುವ ಶಾಸಕರು ಹಾಗೂ ಮಾಜಿ ಸಚಿವರಾದ ಎಸ್.ಸುರೇಶಕುಮಾರ, ವಿ.ಸೋಮಣ್ಣ, ಕೆಎಲ್ಇ ಅಧ್ಯಕ್ಷರಾದ ಶಿವಾನಂದ ಕೌಜಲಗಿ, ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆ ಹಾಗೂ ಗಣ್ಯರು.



ಕೆಎಲ್ಇ ಸಿ.ಬಿ.ಕೋರೆ ಪಾಲಿಟೆಕ್ನಿಕ್ ಕಾಲೇಜು ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ ಉದ್ಘಾಟಿಸುತ್ತಿರುವ ಚಿಕ್ಕೋಡಿ ಪೂಜ್ಯ ಸಂಪಾದನಾ ಸ್ವಾಮಿಗಳು, ರಾಜ್ಯಸಭಾ ಸದಸ್ಯರು ಹಾಗೂ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆ, ವಿಧಾನ ಪರಿಷತ್ ವಿರೋಧಪಕ್ಷದ ಮುಖ್ಯ ಸಚೇತಕರಾದ ಮಹಾಂತೇಶ ಕವಟಗಿಮಠ, ಕೆಎಲ್ಇ ನಿರ್ದೇಶಕರಾದ ಬಿ.ಆರ್.ಪಾಟೀಲ ಹಾಗೂ ಗಣ್ಯರು.

ಸಂಪುಟ : ೨೧ ಜುಲೈ-೨೦೧೯ ಸಂಚಿಕೆ : ೩




ಕೆಎಲ್‌ಇ ಘಟಿಕೋತ್ಸವದಲ್ಲಿ ಗೌರವಡಾಕ್ಟರೇಟ್ [illegible]
ಎಂ. ವೆಂಕಯ್ಯ ನಾಯ್ಡು ಅವರಿಗೆ [illegible]
ಗೌರವಿಸುತ್ತಿರುವ ಕೆಎಲ್‌ಇ
ಕುಲಾಧಿಪತಿ ಡಾ. ಪ್ರಭಾಕರ ಕೋರೆಯವರು ಹಾಗೂ
ಕುಲಪತಿ ಡಾ. ವಿವೇಕ ಸಾವೋಜಿ.

## ಒಳ ಪುಟಗಳಲ್ಲಿ


| | | ಪುಟ ಸಂಖ್ಯೆ |
|---|---|---|
| ೧. | ಸಂಪಾದಕೀಯ | ೦೨ |
| ೨. | ಅಂಗಸಂಸ್ಥೆ ಮಾಲಿಕೆ – ೭೭ | ೦೩ |
| ೩. | ನೆನಪಿನಂಗಳ | ೦೫ |
| ೪. | ಕೆ.ಎಲ್.ಇ. ವಾರ್ತೆಗಳು | ೦೮ |
| ೫. | ಅಂಗಸಂಸ್ಥೆಗಳ ವರದಿಗಳು | ೨೦ |


**ಗೌರವ ಸಂಪಾದಕರು**
ಪ್ರಾ. ಬಿ. ಎಸ್. ಗವಿಮಠ

**ಸಂಪಾದಕರು**
ಡಾ. ಮಹೇಶ ಗುರನಗೌಡರ

**ಸಂಪರ್ಕ ವಿಳಾಸ**
ಕೆ.ಎಲ್.ಇ. ವಾರ್ತಾಪತ್ರ
ಕೆ.ಎಲ್.ಇ. ಪ್ರಧಾನ ಕಛೇರಿ
ಕಾಲೇಜ ರೋಡ,
ಬೆಳಗಾವಿ-೫೯೦ ೦೦೧
ದೂರವಾಣಿ : ೨೪೭೦೪೭೦
ಫ್ಯಾಕ್ಸ : ೦೮೩೧-೨೪೭೦೪೬೦

ಪ್ರಕಾಶಕರು : ಕಾರ್ಯದರ್ಶಿಗಳು, ಕೆ.ಎಲ್.ಇ. ಸಂಸ್ಥೆ, ಬೆಳಗಾವಿ-೫೯೦೦೦೧.

## ಕೆಎಲ್‌ಇ ಚಿತ್ತ ಸಂಶೋಧನೆಯತ್ತ

2018ನೇ ವರ್ಷವು ಆರೋಗ್ಯಸೇವೆ, ವೈಜ್ಞಾನಿಕ ಸಂಶೋಧನೆ ಮತ್ತು ತಾಂತ್ರಿಕ ಆವಿಷ್ಕಾರಗಳಲ್ಲಿ ಹೊಸತನ್ನು ಸಾಧಿಸಿದ ವರ್ಷ. ಉತ್ತಮ ಸಮಾಜ ನಿರ್ಮಾಣಕ್ಕಾಗಿ ಗುಣಮಟ್ಟದ ಸಂಶೋಧನೆಗಳನ್ನು ಕಾರ್ಯಗತಗೊಳಿಸಲು ಜಾಗತಿಕ ಸಮುದಾಯವನ್ನು ಕೆಎಲ್‌ಇ ಅಂಗಳಕ್ಕೆ ಬರಮಾಡಿಕೊಂಡು ಫಲಪ್ರದವಾದ ವಿಚಾರವಿನಿಮಯಕ್ಕೆ ವೇದಿಕೆ ಕಲ್ಪಿಸಿದ್ದು ಐತಿಹಾಸಿಕ.

ಕೆಎಲ್‌ಇ ಸಂಸ್ಥೆಯ ಬಿ.ವಿ.ಭೂಮರಡ್ಡಿ ಅಭಿಯಾಂತ್ರಿಕ ಹಾಗೂ ತಾಂತ್ರಿಕ ಮಹಾವಿದ್ಯಾಲಯವು ಉತ್ತರ ಕರ್ನಾಟಕದ ಪ್ರಪ್ರಥಮ ತಾಂತ್ರಿಕ ಶಿಕ್ಷಣ ಸಂಸ್ಥೆಯಾಗಿ ರೂಪಗೊಂಡು ಜಾಗತಿಕ ಮನ್ನಣೆಯನ್ನು ಗಳಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಆಧುನಿಕ ಅವಶ್ಯಕತೆಗಳಿಗೆ ಅನುಸಾರವಾಗಿ, ಸಂಶೋಧನೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸುವ ಸ್ಪಷ್ಟ ಗುರಿಯನ್ನಿಟ್ಟುಕೊಂಡು ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯವಾಗಿ ರೂಪಾಂತರ ಹೊಂದಿದ್ದು, ಕೆಎಲ್‌ಇ ಇತಿಹಾಸದಲ್ಲಿ ಗಮನಾರ್ಹವಾದ ಮೈಲುಗಲ್ಲಾಗಿದೆ. ಸಂಶೋಧನಾ ಕ್ಲಸ್ಟರ್‌ಗಳನ್ನು ಅಂತರ್‌ಶಿಕ್ಷಣ ಸಂಶೋಧನೆಗಳ ಉದ್ದೇಶಗಳಿಗಾಗಿ ರಚಿಸಿ ಪೋಷಿಸುವ ಮೂಲಕ ವಿಶ್ವವಿದ್ಯಾಲಯವು ಮಾರ್ಗಸೂಚಿಯನ್ನು ಸಿದ್ಧಪಡಿಸಿದೆ. ಈ ದಿಕ್ಕಿನಲ್ಲಿ ಯಶಸ್ವಿಯಾಗಲು ಪ್ರಮುಖ ಉದ್ಯಮಗಳೊಂದಿಗೆ ಕೈಜೋಡಿಸಿದೆ.


ಉತ್ಪನ್ನಗಳ ನಾವೀನ್ಯತೆ ಹಾಗೂ ಪ್ರಗತಿಪರವಾದ ಅಭಿವೃದ್ಧಿಯನ್ನು ಸಾಧಿಸುವ ಸಾಮರ್ಥ್ಯವನ್ನು ಬಲಪಡಿಸಲು ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯವು 'ಸೆಂಟರ್ ಫಾರ್ ಇನೋವೇಶನ್ ಆ್ಯಂಡ್ ಪ್ರೊಡಕ್ಟ್ ಡೆವಲಪ್‌ಮೆಂಟ್' (ಸಿಪಿಐಡಿ) ಯನ್ನು ಸ್ಥಾಪಿಸಲಾಗಿದೆ. ಕಬ್ಬಿನ ಬೆಳೆಯಿಂದ ಉಂಟಾಗುವ ಜೈವಿಕ ತ್ಯಾಜ್ಯ ಉರಿಸುವುದರಿಂದ ಉದ್ಭವಿಸುವ ಪರಿಸರದ ಮಾಲಿನ್ಯದ ಕುರಿತು ಜಾಗೃತಿ ಮೂಡಿಸಿ, ಕೃಷಿಕರು ಹಾಗೂ ಸಮಾಜಕ್ಕೆ ಒಳಿತಾಗುವ ಕಾರ್ಯಯೋಜನೆಯನ್ನು ಸಾಮಾಜಿಕ ಗುರಿ ಸಾಧಿಸುವ ದಿಸೆಯಲ್ಲಿ ಇಟ್ಟಿರುವ ಒಂದು ಪುಟ್ಟ ಹೆಜ್ಜೆಯಾಗಿದೆ. ಕಬ್ಬಿನ ಕಸದಿಂದ ನೈಸರ್ಗಿಕ ಜೀವಚಕ್ರಕ್ಕೆ ಅನುಗುಣವಾಗಿ ಅಧಿಕ ಮೌಲ್ಯಯುತವಾಗಿ ಇಂಧನದ ಬಳಕೆಯ ಕುರಿತಾದ ಒಂದು ಅತ್ಯುತ್ತಮ ವ್ಯವಹಾರಿಕ ಮಾದರಿಯನ್ನು ರೂಪಿಸಿದ್ದು, ಇದನ್ನು ಈಗಾಗಲೇ ಉತ್ತರ ಕರ್ನಾಟಕದ 4 ಉದ್ಯಮಶೀಲರು ಅಳವಡಿಸಿಕೊಂಡಿದ್ದಾರೆ.

ಹುಬ್ಬಳ್ಳಿಯ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯವು ಅಮೇರಿಕೆಯ ಪರಡ್ಯೂ ವಿಶ್ವವಿದ್ಯಾಲಯದ ಜೊತೆಗೂಡಿ ಅಮೇರಿಕೆಯ ಅಂತರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿಯಿಂದ ಆರ್ಥಿಕ ಸಹಾಯ ಪಡೆದ ಲೇಸರ್ ಪಲ್ಸ್ ಯೋಜನೆಯಲ್ಲಿ ಭಾಗಿಯಾಗಿರುವ ವಿಶ್ವವಿದ್ಯಾಲಯಗಳ ಒಕ್ಕೂಟದಲ್ಲಿ ಒಂದಾಗಿದೆ. ಈ ಒಕ್ಕೂಟದಲ್ಲಿ ಕ್ಯಾಥೋಲಿಕ್ ರಿಲೀಫ್ ಸರ್ವಿಸಸ್, ಇಂಡಿಯಾನಾ ವಿಶ್ವವಿದ್ಯಾಲಯ, ಮೇಕೆರೆರೆ ವಿಶ್ವವಿದ್ಯಾಲಯ ಮತ್ತು ನಾಟ್ರೆಡಾಮ ವಿಶ್ವವಿದ್ಯಾಲಯಗಳು ಸೇರಿವೆ.

ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ ಆ್ಯಂಡ್ ರಿಸರ್ಚ್ (ಡೀಮ್ಡ್ ಟು ಬಿ ಯುನಿವರ್ಸಿಟಿ) 2006 ರಲ್ಲಿ ಸ್ಥಾಪಿತವಾಗಿದ್ದು, ಈ ವಿಶ್ವವಿದ್ಯಾಲಯವು ತನ್ನ ಶೈಕ್ಷಣಿಕ ಶ್ರೇಷ್ಠತೆಯ ಸಂಪ್ರದಾಯವನ್ನು ಮುಂದುವರೆಸಿರುವುದು ಅಭಿನಂದನೀಯ. ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ ಆ್ಯಂಡ್ ರಿಸರ್ಚ್‌ವು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ 'ಭಾರತೀಯ ವಿಶ್ವವಿದ್ಯಾಲಯ'ಗಳ ವರ್ಗದಲ್ಲಿ ಉನ್ನತ ದರ್ಜೆಯ ರ‍್ಯಾಂಕನ್ನು ಸಂಪಾದಿಸಿದೆ. ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ವತಿಯಿಂದ ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನೀಡಲಾಗುವ ರಾಷ್ಟ್ರಮಟ್ಟದ 'ಸ್ವಚ್ಛತಾ ರ‍್ಯಾಂಕಿಂಗ್'ನಲ್ಲಿ, 2017ರಲ್ಲಿ 4ನೇ ಸ್ಥಾನವನ್ನು ಪಡೆದಿದ್ದ ಕೆಎಲ್‌ಇ ವಿವಿ 2018ರಲ್ಲಿ 3ನೇ ಸ್ಥಾನವನ್ನು ಪಡೆದಿರುವುದು ಸಂಸ್ಥೆಗೆ ಅಭಿಮಾನದ ಸಂಗತಿಯಾಗಿದೆ. ಅಂತೆಯೆ ಅಖಿಲ ಭಾರತ ಮಟ್ಟದಲ್ಲಿ 5ನೇ ಸ್ಥಾನ ನೀಡಿರುವುದು ಅತ್ಯಂತ ಹೆಮ್ಮೆಯ ವಿಷಯ. ಕೆಎಲ್‌ಇ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯದ ಸ್ಥಾಪನೆಯೊಂದಿಗೆ ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರವು ಮತ್ತಷ್ಟು ವೈವಿಧ್ಯಪೂರ್ಣವಾಗಿ ವಿಸ್ತಾರಗೊಂಡಿದೆ. ನರೇಂದ್ರ ಮೋದಿಯವರ ಆಶಯದಂತೆ ಕೆಎಲ್‌ಇ ಈ ಎರಡು ವಿಶ್ವವಿದ್ಯಾಲಯಗಳು ತಮ್ಮ ನಿಖರ ಸಂಶೋಧನೆ ಹಾಗೂ ಗುಣಮಟ್ಟದ ಶಿಕ್ಷಣದ ಮೂಲಕ ಹೊಸ ದಿಗಂತದೆಡೆ ಹೆಜ್ಜೆ ಇಡುತ್ತಿರುವುದು ಸರ್ವಸತ್ಯ. 2019ನೇ ಶೈಕ್ಷಣಿಕ ಸಾಲು ಕೆಎಲ್‌ಇ ಸಂಸ್ಥೆಯನ್ನು ಜಾಗತಿಕವಾಗಿ ಮತ್ತಷ್ಟು ವಿಸ್ತರಿಸಲಿ ಎಂಬುದು ಕೆಎಲ್‌ಇ ವಾರ್ತಾಪತ್ರದ ಹಾರೈಕೆ.

□□

# ಬೆಂಗಳೂರಿನ ರಾಜಾಜಿನಗರದಲ್ಲಿ ನೂತನವಾಗಿ ಉದ್ಘಾಟನೆಗೊಂಡ ಕೆಎಲ್‌ಇ ದಿ ಬ್ಯಾನಿಯನ್ ಶಾಲೆ




ಜಾಗತಿಕವಾಗಿ ವಿಸ್ತರಿಸಿರುವ ಕೆಎಲ್‌ಇ ಸಂಸ್ಥೆಯು ತನ್ನ ಶೈಕ್ಷಣಿಕ–ಆರೋಗ್ಯ–ಸಂಶೋಧನಾತ್ಮಕ ಚಟುವಟಿಕೆಗಳಿಂದ ಜನಮನ್ನಣೆಗೆ ಪಾತ್ರವಾಗಿದೆ. ಶಿಶುವಿಹಾರದಿಂದ ಸ್ನಾತಕೋತ್ತರ ಶಿಕ್ಷಣದವರೆಗೆ, ವೈದ್ಯಕೀಯ ವಿಶ್ವವಿದ್ಯಾಲಯದಿಂದ ತಾಂತ್ರಿಕ ವಿಶ್ವವಿದ್ಯಾಲಯದವರೆಗೆ ಬೆಳೆದು ನಿಂತಿದೆ. ಹೀಗೆ ಸಮಾಜಮುಖಿಯಾಗಿ ವಿಶಿಷ್ಟ ಕೊಡುಗೆಯನ್ನು ನೀಡುತ್ತಿರುವ ಕೆಎಲ್‌ಇ ಸಂಸ್ಥೆಯು ಶಿಶುವಿಹಾರಗಳಿಗೂ ಅಂತರಾಷ್ಟ್ರೀಯ ಸ್ಪರ್ಶ ನೀಡುವ ಮೂಲಕ ಅವುಗಳ ಬೆಳವಣಿಗೆಯಲ್ಲಿಯೂ ವಿಶೇಷ ಗಮನ ಹರಿಸಿದೆ. ಈಗಾಗಲೇ ಬೆಳಗಾವಿ, ಹುಬ್ಬಳ್ಳಿ, ಬೆಂಗಳೂರಿನ ನಾಗರಬಾವಿಯಲ್ಲಿ ಬ್ಯಾನಿಯನ್ ಶಾಲೆಗಳನ್ನು ಪ್ರಾರಂಭಿಸಿ ನೂತನ ಭಾಷ್ಯಬರೆದಿದ್ದ ಕೆಎಲ್‌ಇ ಸಂಸ್ಥೆ ಈಗ ಬೆಂಗಳೂರಿನ ರಾಜಾಜಿನಗರದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಶಿಶುವಿಹಾರದ ನೂತನ ಕಟ್ಟಡವನ್ನು ಉದ್ಘಾಟಿಸಿದೆ. ಈ ಶೈಕ್ಷಣಿಕ ಸಾಲಿನಿಂದಲೇ ಕಿರಿಯ ಹಾಗೂ ಹಿರಿಯ ಶಿಶುವಿಹಾರಗಳಿಗೆ ಚಾಲನೆ ನೀಡಿದೆ.

ಕೆಎಲ್‌ಇ ದಿ ಬ್ಯಾನಿಯನ್ ಮಕ್ಕಳನ್ನು ಪೋಷಿಸಿ ಬೆಳೆಸುವ ಸಾಂಸ್ಕೃತಿಕ ಕಲಿಕಾಕೇಂದ್ರ, ಶಿಶು ಮಕ್ಕಳಿಗೆ ಉತ್ತಮವಾದ ಕಲಿಕಾಶಕ್ತಿಯನ್ನು ಮೂಡಿಸುವಲ್ಲಿ ಇದೊಂದು ಕಲಾವೈಭವದ ಸುಸಜ್ಜಿತ ಶಾಲೆಯಾಗಿದೆ. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಪೋಷಕರೊಂದಿಗೆ ಕೈಜೋಡಿಸುವಲ್ಲಿ ಶಾಲೆ ಸಹಕಾರಿಯೆನಿಸಿದೆ. ಬಾಲ ಪ್ರತಿಭೆಗಳಲ್ಲಿ ಹುದುಗಿರುವ ಕೌಶಲಗಳನ್ನು ಹೊರಹೊಮ್ಮಿಸುವಲ್ಲಿ ಬ್ಯಾನಿಯನ್ ಶಾಲೆಗಳ ಪಾತ್ರ ಹಿರಿದಾಗಿದೆ. ಮಕ್ಕಳ ವಿಕಾಸದ

ಹಂತದಲ್ಲಿ ಅವರ ಪ್ರತಿಯೊಂದು ಹೆಜ್ಜೆಯಲ್ಲಿಯೂ ವಿಭಿನ್ನ ಹಾಗೂ ವಿಶಿಷ್ಟ ಅಭಿವ್ಯಕ್ತಿಯನ್ನು ಗುರುತಿಸುವ ಕಾರ್ಯವನ್ನು ಬ್ಯಾನಿಯನ್ ಶಾಲೆ ಮಾಡುತ್ತಿದೆ. ಪ್ರತಿಯೊಂದು ಮಗುವು ಕಲಿಕೆಯನ್ನು ಸಂತೋಷದಿಂದ ಹಾಗೂ ಉಲ್ಲಾಸದಿಂದ ಕಲಿಯುವಂತೆ ಮಾಡುವುದು ಶಾಲೆಯ ಉದ್ದೇಶವಾಗಿದ್ದು ಮಕ್ಕಳಲ್ಲಿ ಅಂತಹ ಅನ್ವೇಷಣೆಯನ್ನು ಗುರುತಿಸುವುದಾಗಿದೆ. ಮಕ್ಕಳು ಸಮುದಾಯದಲ್ಲಿ ಬೆಳೆಯುವದರಿಂದ ಅವರಲ್ಲಿ ಸಹಜವಾಗಿಯೇ ಸಾಂಘಿಕ ಮನೋಭಾವಗಳು ಸದೃಢಗೊಂಡು ವಿಕಸನಕ್ಕೆ ದಾರಿಮಾಡಿಕೊಡುತ್ತವೆ. ಈ ಕಾರ್ಯ ಬ್ಯಾನಿಯಾನ್ ಶಾಲೆಯ ಪ್ರಮುಖ ಧ್ಯೇಯವೆನಿಸಿ ಕೊಂಡಿದೆ.

ದಿ ಬ್ಯಾನಿಯನ್ ಶಾಲೆಯು ಮಕ್ಕಳಲ್ಲಿ ಗರಿಷ್ಠ ಬೋಧನೆ ಹಾಗೂ ಪ್ರಾಯೋಗಿಕ ಶಿಕ್ಷಣದ ಮೂಲಕ ಅವರಲ್ಲಿ ಕಲಿಕಾಸಕ್ತಿಯನ್ನು ಮೂಡಿಸುತ್ತಿದೆ. ಇನ್ನೊಂದು ವಿಶೇಷವೆಂದರೆ ಅಜ್ಞಾತದಿಂದ ಜ್ಞಾತದವರೆಗೆ, ದೂರದಿಂದ ಹತ್ತಿರದವರೆಗೆ, ಸಂಕೀರ್ಣದಿಂದ ಸರಳತೆಯೆಡೆಗೆ, ಅಮೂರ್ತದಿಂದ ಮೂರ್ತದೆಡೆಗೆ ಶಿಶುವನ್ನು ರೂಪಿಸುವುದೇ ಬ್ಯಾನಿಯನ್ ಶಾಲೆಯ ಗುರಿ ಹಾಗೂ ದರ್ಶನ.

ಈ ಶಾಲೆಯಲ್ಲಿ ೧.೯ ವರ್ಷದಿಂದ ೬ ವರ್ಷದ ವರೆಗಿನ ಮಕ್ಕಳು ಪ್ರವೇಶ ಪಡೆಯಬಹುದು. ವಿದ್ಯಾರ್ಥಿಗಳ ವಯೋಮಾನಕ್ಕೆ ಅನುಗುಣವಾಗಿ ಹಲವಾರು ವಿಭಾಗಗಳಲ್ಲಿ ಮಕ್ಕಳಿಗೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇಲ್ಲಿಯ ಶಿಕ್ಷಣ ಕಾರ್ಯಕ್ರಮದಲ್ಲಿ ಮಗುವಿನಲ್ಲಿ ಕಲಿಕಾಸಕ್ತಿಯು ಉಳಿಯುವಂತೆ ವಿನ್ಯಾಸಗೊಳಿಸಲಾಗಿದೆ. ಪಾಠಗಳನ್ನು ಸ್ನೇಹಪರ ವಾತಾವರಣದಲ್ಲಿ ಕಲಿಸಲಾಗುತ್ತಿದೆ. ಮಗುವಿನ ಕೌಶಲ್ಯ ಹಾಗೂ ಸಾಮರ್ಥ್ಯಕ್ಕೆ ಅನುಗುಣವಾದ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ಮಗುವಿನ ಸಂವಹನ ಕೌಶಲ ಹಾಗೂ ಭಾಷೆ ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಸಂಗೀತದಂತಹ ವಿವಿಧ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಕಲಿಕೆಯ ವಿಧಾನಗಳನ್ನು ಮೂಡಿಸಲಾಗುತ್ತಿದೆ.

ಬ್ಯಾನಿಯನ್ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣದ ಮಾನದಂಡಗಳಿಗೆ ಪ್ರಮುಖ ಆದ್ಯತೆ ನೀಡಲಾಗಿದ್ದು ಪ್ರಕೃತಿಯೇ ಮಗುವಿಗೆ ಅತ್ಯುತ್ತಮವಾದ ಶಿಕ್ಷಕ. ಪ್ರಕೃತಿಯನ್ನೇ ನೋಡಿ ಮಗು ಬೆಳವಣಿಗೆಯನ್ನು ಹೊಂದುತ್ತದೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಪ್ರಕೃತಿಯೇ ಪ್ರಥಮ ಗುರುವೆಂಬ ಭಾವ ಬ್ಯಾನಿಯನ್ ಶಾಲೆಗಳದ್ದು. ಅಂತೆಯೆ ಈ ಶಾಲೆಯಲ್ಲಿ ಪ್ರಕೃತಿಗೆ ಹೆಚ್ಚಿನ ಆದ್ಯಗಮನ ನೀಡಲಾಗಿದೆ. ಆದ್ದರಿಂದ ಪ್ರಸ್ತುತ ಶಾಲೆಯು ಸ್ಥಳೀಯ ಸಂಪನ್ಮೂಲದೊಂದಿಗೆ ಜಾಗತಿಕ ಶಿಕ್ಷಣಕ್ಕೆ ಮುನ್ನುಡಿ ಬರೆಯುತ್ತಿದೆ. ಕಲಿಕೆಯ ವಿಧಾನಗಳಲ್ಲಿ ಮಕ್ಕಳು ನೋಡುವುದರ ಮೂಲಕ ಮಾಡಿ ಕಲಿಯುತ್ತಾರೆ, ಆಡಿ ನಲಿಯುತ್ತಾರೆ.

ಪ್ರತಿಯೊಂದು ತಿಂಗಳಲ್ಲಿಯೂ ಮಗು ವಿಶಿಷ್ಟವಾದ ಕಲಿಕಾ ವಿಷಯಗಳನ್ನು ಮನನಮಾಡಿಕೊಳ್ಳಲಿದೆ. ಈ ಹಂತದಲ್ಲಿ ಅಗತ್ಯವಾಗಿ ಬೇಕಾದ ಪಠ್ಯವನ್ನು ಜಾಗತಿಕಮಟ್ಟದಲ್ಲಿ ಗಮನಿಸಿ ಪಠ್ಯವನ್ನು ಸಿದ್ಧಪಡಿಸಲಾಗಿದೆ. ವಿಶಾಲವಾದ ಪ್ರಾಂಗಣ ಹೊಂದಿರುವ ಶಾಲೆ ಸುಸಜ್ಜಿತ ಕೊಠಡಿಗಳನ್ನು ಹೊಂದಿದೆ. ಮಕ್ಕಳಿಗೆ ಉತ್ತಮವಾದ ಕುಡಿಯುವ ನೀರು, ಶೌಚಾಲಯದೊಂದಿಗೆ ಸಿಸಿಟಿವಿ ಕ್ಯಾಮರಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಹೀಗೆ ಕೆಎಲ್‌ಇ ಸಂಸ್ಥೆಯು ಅತ್ಯಂತ ಮುತುವರ್ಜಿಯಿಂದ ಶಿಶುವಿಹಾರಕ್ಕೆ ವಿಶೇಷವಾದ ಸೌಲಭ್ಯಗಳನ್ನು ಒದಗಿಸಿ ಮಕ್ಕಳ ಬೆಳವಣಿಗೆಗೆ ಶ್ರಮಿಸಿದೆ. ಡಾ. ಪ್ರಭಾಕರ ಕೋರೆಯವರ ಹಾಗೂ ಆಡಳಿತ ಮಂಡಳಿಯವರ ಪ್ರಬಲವಾದ ಇಚ್ಛಾಶಕ್ತಿಯ ಫಲವಾಗಿ ರೂಪುಗೊಂಡಿರುವ ದಿ ಬ್ಯಾನಿಯನ್ ಶಿಶುಮಕ್ಕಳನ್ನು ಉತ್ತಮವಾದ ನಾಗರೀಕರನ್ನಾಗಿ ನಿರ್ಮಿಸುವುದು ಮಾತ್ರವಲ್ಲ ಭವಿಷ್ಯತ್ತಿನ ನಾಯಕರನ್ನಾಗಿ ರೂಪಿಸಲಿದೆ ಎಂದರೇ ಅತಿಶಯೋಕ್ತಿಯಾಗಲಾರದು.

□□

# ನಾಡು ನುಡಿಗಳಿಗಾಗಿ ಜೀವತೆತ್ತ ಕೆಎಲ್‌ಇ ಸಂಸ್ಥಾಪಕರು

ಪ್ರಾ. ಬಿ. ಎಸ್. ಗವಿಮಠ
ಕೆಎಲ್‌ಇ ಸಂಸ್ಥೆಯ ನಿವೃತ್ತ ಆಜೀವ ಸದಸ್ಯರು, ಬೆಳಗಾವಿ



೧೯೧೬ರಲ್ಲಿ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ ಏಳು ಜನ ಶಿಕ್ಷಕರು ಲಿಂಗೈಕ್ಯ ಪಂಡಿತಪ್ಪ ಚಿಕ್ಕೋಡಿ, ಎಂ.ಆರ್.ಸಾಖರೆ, ಶಿ.ಶಿ.ಬಸವನಾಳ, ಎಚ್.ಎಫ್.ಕಟ್ಟೀಮನಿ, ಬಿ.ಬಿ.ಮಮದಾಪುರ, ಬಿ.ಎಸ್.ಹಂಚಿನಾಳರು, ಸರದಾರ ವೀರನಗೌಡ ಪಾಟೀಲ ಹಾಗೂ ಅವರಿಗೆ ಅಖಂಡ ಬೆಂಬಲ ನೀಡಿದ ಪ್ರಾತಃಸ್ಮರಣೀಯ ರಾವಬಹದ್ದೂರ ಅರಟಾಳ ರುದ್ರಗೌಡರು, ರಾವ ಬಹಾದ್ದೂರ ವೈಜಪ್ಪ ಅನಿಗೋಳ ಹಾಗೂ ರಾವ ಬಹಾದ್ದೂರ ವ್ಹಿ.ಜಿ. ನಾಯಕ ದೇಸಾಯಿ ಚಚಡಿ ಇವರ ನಿಸ್ವಾರ್ಥ ಸೇವೆ ವ್ಯರ್ಥವಾಗದೆ ಇಡೀ ಸಮಾಜಕ್ಕೆ ಹೊಸ ಪ್ರಗತಿಯ ಹೆದ್ದಾರಿ ನಿರ್ಮಿಸಿತು. ಪೇಶ್ವೆಗಳ ಆಡಳಿತದಲ್ಲಿ ಮರಾಠಿಮಯವಾಗಿದ್ದ ಕನ್ನಡದ ನೆಲವನ್ನು ಹದಗೊಳಿಸಿ ಬೆಳಗಾವಿಯಲ್ಲಿ ಕೆ.ಎಲ್.ಇ. ಮೂಲಕ ಕನ್ನಡದ ಬೀಜವನ್ನು ಬಿತ್ತಿದ ಕೆ.ಎಲ್.ಇ. ಸಂಸ್ಥಾಪಕರು, ದಾನಿಗಳನ್ನು ಗುರುತಿಸಿ ಅವರ ಮನೆಗಳಿಗೆ ಖುದ್ದಾಗಿ ಹೋಗಿ ದೇಣಿಗೆ ಸಂಗ್ರಹಿಸಿ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು.

ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸ್ಥಾಪಿಸಲು ಕಾರಣರಾದ ರಾವ ಬಹಾದ್ದೂರ ಅರಟಾಳ ರುದ್ರಗೌಡರ ಶಿಕ್ಷಣ ಪ್ರೀತಿ ಅನನ್ಯವಾದುದು. ಅರಟಾಳ ರುದ್ರಗೌಡರು ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸ್ಥಾಪಿಸಲು ಸಂಗ್ರಹಿಸಿದ ನಿಧಿಯನ್ನು ಬ್ಯಾಂಕಿನಲ್ಲಿಟ್ಟರು. ಇವರಂತೆಯೇ ರೊದ್ದ ಶ್ರೀನಿವಾಸರಾಯರೂ ನಿಧಿ ಸಂಗ್ರಹಿಸಿಕೊಡಬೇಕಾಗಿತ್ತು. ಆದರೆ ಅರಟಾಳ ರುದ್ರಗೌಡರಂತೆ ರೊದ್ದ ಶ್ರೀನಿವಾಸರಾಯರಿಗೆ ಅಲ್ಪಾವಧಿಯಲ್ಲಿ ನಿಧಿ ಸಂಗ್ರಹಿಸಲಾಗಲಿಲ್ಲ. ಅವರಿಗೆ ಹೆಚ್ಚಿನ ಅವಧಿ ಬೇಕಾಯಿತು. ಅವರು ನಿಗದಿತ ಹಣವನ್ನು ಸಂಗ್ರಹಿಸುವವರೆಗೆ ಅರಟಾಳರು ತಾವು ಸಂಗ್ರಹಿಸಿದ ಹಣವನ್ನು ಬ್ಯಾಂಕಿನಲ್ಲಿ ಇಟ್ಟರು. ಆ ಹಣದಿಂದ ದೊರೆತ ಬಡ್ಡಿ ಹಣ ರೂ ೨೭೨೭-೦೪ ಆಣೆ ಹಾಗೂ ತಮ್ಮ ವೈಯಕ್ತಿಕ ೪೦೦ ರೂ.ಗಳನ್ನು ಸೇರಿಸಿ ಆ ಏಳು ಜನ ಶಿಕ್ಷಕರಿಗೆ ನೀಡಿದ್ದರಿಂದಲೇ ಬೆಳಗಾವಿಯಲ್ಲಿ ಎ.ವ್ಹಿ.ಸ್ಕೂಲ ( ಆಂಗ್ಲೋ ವ್ಹರ್ನಾಕ್ಯುಲರ ಶಾಲೆ) ೧೩-೧೧-೧೯೧೬ ರಂದು ಪ್ರಾರಂಭವಾಯಿತು.

೧೯೧೬ ರಿಂದ ೧೯೩೦ ರವರೆಗೆ ಬೆಳಗಾವಿಯ ಕಿಲ್ಲೆಯೊಳಗಿನ ಬಂಗ್ಲೆ ನಂ.೨೪ರಲ್ಲಿ ನಡೆದ ಈ ಶಾಲೆ ಈ ಅವಧಿಯಲ್ಲಿ ತುಂಬ ಕಷ್ಟದ ಹಾದಿಯಲ್ಲಿ ಮುನ್ನಡೆಯಿತು. ಏಳು ಜನ ಶಿಕ್ಷಕರು ೧೯೧೬ರಲ್ಲಿ ತಿಂಗಳಿಗೆ ಎಲ್ಲರೂ ಸೇರಿ ೧೦೦ ರೂ. ವೇತನ ಪಡೆಯುತ್ತಿದ್ದರು. ವಿದ್ಯಾರ್ಥಿಗಳಿಂದ ಫೀಸು ಬರಹತ್ತಿದ ಮೇಲೆ ೧೫೦ ರೂ. ಪಡೆಯಹತ್ತಿದರು. ಎಲ್ಲರೂ ಸೇರಿ ಖಡೇಬಜಾರ್‌ದಲ್ಲಿರುವ ಶ್ರೀ ಮರೆಪ್ಪಣ್ಣ ಭೋಜಣ್ಣವರ ಮನೆಯ ಅಟ್ಟದ ಮೇಲೆ ತಿಂಗಳಿಗೆ ೧೫ ರೂ ಬಾಡಿಗೆ ಕೊಡುವ ಕರಾರಿನ ಮೇಲೆ ಇರುತ್ತಿದ್ದರು. ಪ್ರಾರಂಭದ ದಿನಗಳಲ್ಲಿ ಇವರು ಖಾನಾವಳಿಯಲ್ಲಿ ಊಟ ಮಾಡುತ್ತಿದ್ದರು. ನಂತರ ಪಂಡಿತಪ್ಪ ಚಿಕ್ಕೋಡಿಯವರ ಧರ್ಮಪತ್ನಿಯೆಂದರೆ ಗೌರಮ್ಮನವರು (ಭೋಜಣ್ಣನವರ ಮರೆಪ್ಪನವರ ಮಗಳು ಹಾಗೂ ಗುರುಸಿದ್ದಪ್ಪನವರ ತಂಗಿ) ಈ ಗೌರಮ್ಮನವರೇ ಈ ಏಳೂ ಜನ ಶಿಕ್ಷಕರಿಗೆ ಅಡಿಗೆ ಮಾಡಿ ಊಟಕ್ಕೆ ಬಡಿಸುತ್ತಿದ್ದರು.

೧೯೧೭ರಲ್ಲಿ ಜೂನ್ ತಿಂಗಳಿನಿಂದ ಏಳೂ ಜನ ಶಿಕ್ಷಕರು ೩೫ರೂ. ವೇತನ ಪಡೆದರೆ ೧೯೧೮ರ ಜೂನದಲ್ಲಿ ತಿಂಗಳಿಗೆ ೫೦ ರೂ ವೇತನ ಪಡೆದಿದ್ದರ ಬಗ್ಗೆ ದಾಖಲೆಗಳಿವೆ.

ಶಿಕ್ಷಣದ ಬಗೆಗಿನ ಮಹತ್ವ ಅರಿಯದ ಅಶಿಕ್ಷಿತ ಸಮಾಜವೊಂದರ ಹೀನಾಯ ಸ್ಥಿತಿಗೆ ಮರುಗಿದ ಸಂಸ್ಥಾಪಕರು ಸಮಾಜ ಸುಶಿಕ್ಷಿತಗೊಂಡರೆ ಮಾತ್ರ ಬದಲಾವಣೆ ಹಾಗೂ ಪ್ರಗತಿ ಸಾಧ್ಯ ಎಂಬುದನ್ನು ಅರಿತಿದ್ದರು. ಅಂತೆಯೇ ಅವರು ಬ್ರಿಟಿಷ ಆಡಳಿತದಲ್ಲಿ ಹೆಚ್ಚಿನ ವೇತನದ ಉನ್ನತ ಹುದ್ದೆಗಳೂ ಸಹಜವಾಗಿ ದೊರೆಯುತ್ತಿದ್ದಾಗಲೂ ಅವುಗಳನ್ನು ಧಿಕ್ಕರಿಸಿ ಕಡಿಮೆ ವೇತನದಲ್ಲಿಯೇ 'ಮಾಸ್ತರಿಕೆ' ಮಾಡಿ ಉತ್ತರ ಕರ್ನಾಟಕದ ಇತಿಹಾಸವನ್ನು ಬದಲಿಸಲು ಅಹರ್ನಿಶಿ ಶ್ರಮಿಸಿದರು, ನಾಡುನುಡಿಗಳನ್ನು ಉಳಿಸಿದರು ಬೆಳೆಸಿದರು. ೧೯೨೬–೨೮ ರಲ್ಲಿ ಬೆಳಗಾವಿ ಅಂಬರಾಯಿ ಪ್ರದೇಶದ ೧೬ ಗುಂಟೆ ಜಾಗವನ್ನು ೩೦,೦೦೦ ರೂ.ಗಳಿಗೆ ಖರೀದಿಸಿದರು. ಆಗ ರಾಜಾ ಲಖಮಗೌಡರು ೨೦,೦೦೦ ರೂ. ದೇಣಿಗೆ ನೀಡಿ ಕೆ.ಎಲ್.ಇ.ಸೊಸೈಟಿಗೆ ನೆರವಾದರು. ದಾನಿಗಳಿಂದ ನಿಧಿ ಸಂಗ್ರಹಿಸಿದ ಸಂಸ್ಥಾಪಕರು ೮೦,೦೦೦ ರೂ.ಗಳ ಖರ್ಚಿನಲ್ಲಿ ಇಂದಿನ ಲಿಂಗರಾಜ ಕಾಲೇಜಿನ ನೆಲ ಅಂತಸ್ತನ್ನು ಕಟ್ಟಿಸಿದರು. ೧೯೩೦ ರಲ್ಲಿ ಜಿ.ಎ.ಹೈಸ್ಕೂಲು– ಇಂದಿನ ಲಿಂಗರಾಜ ಕಾಲೇಜ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಆಗ ಇನ್ನೂ ಲಿಂಗರಾಜ ಕಾಲೇಜು ಪ್ರಾರಂಭಿಸಲು ಅನುಮತಿ ದೊರೆತಿರಲಿಲ್ಲ.

ಮುಂಬಯಿ ಸರಕಾರದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದ ಸರ್ ಸಿದ್ದಪ್ಪ ಕಂಬಳಿಯವರ ಜಾಣಾಕ್ಷತನ ಹಾಗೂ ದೂರದೃಷ್ಟಿಯ ಫಲವಾಗಿ ೧೯೩೨ ರ ಅಂತ್ಯಕ್ಕೆ ಲಿಂಗರಾಜ ಕಾಲೇಜ ಪ್ರಾರಂಭಿಸಲು ಮುಂಬಯಿ ವಿಶ್ವವಿದ್ಯಾಲಯ ಹಾಗೂ ಸರಕಾರ ಅನುಮತಿ ನೀಡಿದವು. ೧೯೩೩ರಲ್ಲಿ ಕಾಲೇಜು ಪ್ರಾರಂಭವಾಯಿತು. ಡಾ. ಶಿ. ಶಿ. ನಂದೀಮಠರು ಪ್ರಿನ್ಸಿಪಾಲರಾದರು. ೧೧ ವರ್ಷಗಳ ಕಾಲ ಅವರು ಪ್ರಿನ್ಸಿಪಾಲರಾಗಿ ಕಾಲೇಜು ರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಮಾಡಿದರು. ೧೯೩೩ ರಲ್ಲಿಯೇ ಕರ್ನಾಟಕ ಆಯುರ್ವೇದ ವಿದ್ಯಾಪೀಠದವರು ಬಿ.ಎಂ.ಕಂಕಣವಾಡಿ ಆಯುರ್ವೇದ ಕಾಲೇಜ ಪ್ರಾರಂಭ ಮಾಡಿದರು. ೧೯೩೩ ರಿಂದ ೧೯೫೦ ರ ನಡುವಿನ ಕಾಲಘಟ್ಟದಲ್ಲಿ ಕೆ.ಎಲ್.ಇ. ಸಂಸ್ಥಾಪಕರು, ಲಿಂಗರಾಜ ಕಾಲೇಜಿನ ಬೋಧಕ ಸಿಬ್ಬಂದಿ ಗಿಲಗಂಚಿ ಅರಟಾಳ ಹೈಸ್ಕೂಲಿನ ಶಿಕ್ಷಕರು, ಕನ್ನಡ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆಯ ಶಿಕ್ಷಕರು ಬೆಳಗಾವಿಯಲ್ಲಿ ಕನ್ನಡಕ್ಕೆ ಬಲ ತುಂಬುವ ಕೆಲಸ ಮಾಡಿದರು. ಅದೇ ಅವಧಿಯಲ್ಲಿ ಕರ್ನಾಟಕ ಲಾ ಸೊಸೈಟಿಯ ರಾಜಾ ಲಖಮನಗೌಡ ಲಾ ಕಾಲೇಜಿನಲ್ಲಿ ಕಾನೂನು ಪದವಿ ಶಿಕ್ಷಣ ಪಡೆಯಲು ಬರುತ್ತಿದ್ದ ವಿದ್ಯಾರ್ಥಿಗಳೂ ಕನ್ನಡಪರ ಚಳವಳಿಗಳಲ್ಲಿ, ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕನ್ನಡದ ಧ್ವನಿ ಮೊಳಗಿಸುತ್ತಿದ್ದರು. ನಾಡೋಜ ಡಾ.ಪಾಟೀಲ ಪುಟ್ಟಪ್ಪ, ನಾಡಿಗ ಕೃಷ್ಣಮೂರ್ತಿ, ದಿ.ಹಾರ್ನಳ್ಳಿ ರಾಮಸ್ವಾಮಿ ಮುಂತಾದವರ ಯೋಗದಾನ ಅಪೂರ್ವವೆನಿಸಿತು.

೧೯೩೨ ರಲ್ಲಿ ನಾಗನೂರು ಸ್ವಾಮಿಗಳ ಬೋರ್ಡಿಂಗ ಪ್ರಾರಂಭವಾಗಿತ್ತು. ಲಿಂಗರಾಜ ಹಾಸ್ಟೇಲ್ ಕಟ್ಟಡದ ಶಿಲಾನ್ಯಾಸ ಸಮಾರಂಭ ೧೯೩೩ ರಲ್ಲಿ ಜರುಗಿತ್ತು, ಉತ್ತರ ಕರ್ನಾಟಕದ ಮೂಲೆ ಮೂಲೆಗಳಿಂದ ಅವಕಾಶ ವಂಚಿತ ವಿದ್ಯಾರ್ಥಿಗಳು ಪದವಿ ಶಿಕ್ಷಣ ಪಡೆಯಲು ಬೆಳಗಾವಿಗೆ ಬರತೊಡಗಿದರು. ೧೯೨೬ ರಲ್ಲಿಯೇ ರುದ್ರಾಪುರದ ಎಸ್.ಎಂ.ದೇಸಾಯಿಯರು ಬೆಳಗಾವಿಯಲ್ಲಿ ನಾಡಹಬ್ಬ ಆಚರಿಸಲು ಮುಂದಾಗಿದ್ದರು. ದಿ.ಅನಂತರಾವ್ ಚಿಕ್ಕೋಡಿ, ದಿ.ಹಣಮಂತರಾವ್ ಸವಣೂರ್ ಮುಂತಾದವರು ಅವರಿಗೆ ಸಾಥ್ ನೀಡಿದರು. ಲಿಂಗರಾಜ ಕಾಲೇಜು ಪ್ರಾರಂಭವಾದ ಮೇಲೆ ಸಿರಸಂಗಿ ಲಿಂಗರಾಜ ಜಯಂತಿಯನ್ನು ಸಾರ್ವಜನಿಕವಾಗಿ ಆಚರಿಸಲು ತೊಡಗಿದರು. ಆ ಸಂದರ್ಭದಲ್ಲಿ ಕೆ.ಎಲ್.ಇ. ವಿದ್ಯಾರ್ಥಿಗಳು ಊರಲ್ಲಿ ಪ್ರಭಾತ ಫೇರಿ ಹೊರಡಿಸಿ ಜನಜಾಗೃತಿ ಮಾಡುತ್ತಿದ್ದರು. ೧೯೩೪ ರಲ್ಲಿ ಗಣಪತಿ ಗಲ್ಲಿಯಲ್ಲಿ ನಾಡಹಬ್ಬ ಆಚರಿಸುವ ಸಂದರ್ಭದಲ್ಲಿ ಪ್ರೊ. ಶಿ.ಶಿ.ಬಸವನಾಳರ ಮೇಲೆ ಮರಾಠಿಗರು ನಡೆಸಿದ ಹಲ್ಲೆ ಕನ್ನಡಿಗರಲ್ಲಿ ಮತ್ತಷ್ಟು ಒಗ್ಗಟ್ಟು ಮೂಡಿಸಿತು. ೧೯೨೯ರಲ್ಲಿ ಇಂದಿನ ರಿಕ್ಸ ಟಾಕೀಸ ಇರುವ ಸ್ಥಳದಲ್ಲಿ ಶಾಲಿಮಾರ್ ಟಾಕೀಸ್ ಇತ್ತು, ಆ ಸ್ಥಳದಲ್ಲಿಯೇ ಅಖಿಲ ಕರ್ನಾಟಕ ಮೂರನೇ ಸಾಹಿತ್ಯ ಸಮ್ಮೇಳನ ೧೯೨೯ರ ಡಿಸೆಂಬರ ೨೫–೨೮ ರವರೆಗೆ ಜರುಗಿತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಮುದವೀಡು ಕೃಷ್ಣರಾಯರು ವಹಿಸಿದ್ದರು. ಆಗಿನ ಕಾಲದಲ್ಲಿ ಬೆಳಗಾವಿಯಲ್ಲಿ ಪ್ರಮುಖ ಕನ್ನಡಿಗರಾಗಿ ಗುರುತಿಸಿಕೊಂಡವರೆಂದರೆ ಡಾ. ಸವಣೂರು ಹಣಮಂತರಾಯರು, ಬಿ.ಎನ್.ದಾತಾರ, ಬೆಳವಿ ದತ್ತರಾಯರು, ಜೋಶಿ ನಾರಾಯಣರಾಯರು, ಆಡ್ವಣಗಿ ವಕೀಲರು, ಚಿಕ್ಕೋಡಿ ಅನಂತರಾಯರು. ಆ ಕಾಲದಲ್ಲಿಯೂ ಕನ್ನಡಿಗರು ಎರಡು ಗುಂಪುಗಳಲ್ಲಿ ಗುರುತಿಸಿಕೊಂಡಿದ್ದರೂ ಲಿಂಗರಾಜ ಕಾಲೇಜಿನ ಪ್ರೊ.ಎ.ಜಿ.ಕುಲಕರ್ಣಿ ಗುಂಪುಗಾರಿಕೆಯಿಂದ ದೂರವಿದ್ದರು. ಗಿಲಗಂಚಿ ಅರಟಾಳ ಹೈಸ್ಕೂಲಿನ ಶಿಕ್ಷಕರಾಗಿದ್ದ ಡಿ.ಎಸ್.ಕರ್ಕಿ, ಎಸ್.ಡಿ.ಇಂಚಲ, ಬ.ಗಂ.ತುರಮರಿಯವರು ತಮ್ಮ ಕಾವ್ಯದ ಮೂಲಕ, ಲೇಖನಗಳ ಮೂಲಕ, ಭಾಷಣಗಳ ಮೂಲಕ ಕನ್ನಡಿಗರ ಮನಗಳನ್ನು ತಟ್ಟಿ ಅಭಿಮಾನ ತುಂಬುತ್ತಿದ್ದರು. ಆಗ ಆ

ತ್ರಿಮೂರ್ತಿಗಳು "ಕಿಟ್" ಎಂದೇ ಪ್ರಸಿದ್ಧರಾದರು (ಕಿ–ಕರ್ಕಿ, ಆಯ್–ಇಂಚಲ, ಟಿ–ತುರಮರಿ) ಶ್ರೀ ಈಶ್ವರ ಸಣಕಲ್‌ರವರೂ ಆಗ ಬೆಳಗಾವಿಯಲ್ಲಿಯೇ ಇದ್ದರು. ಜೋಶಿ ಅರವಿಂದರಾಯರೂ, ತೋರಗಲ್ಲ ವೆಂಕಟರಾಯರೂ ಕನ್ನಡಕ್ಕಾಗಿಯೇ ಅರ್ಪಿಸಿಕೊಂಡಿದ್ದರು. ಈ ಸಮ್ಮೇಳನದಲ್ಲಿ ನಾಟಕಗಳ ಕುರಿತು ಗೋಷ್ಠಿಯನ್ನು ಇಟ್ಟುಕೊಂಡಿದ್ದರು ಹಾಗೂ ಬಿ.ಎಂ.ಶ್ರೀಯವರ ಗದಾಯುದ್ಧ ನಾಟಕವನ್ನು ಲಿಂಗರಾಜ ಕಾಲೇಜ ವಿದ್ಯಾರ್ಥಿಗಳು ಅಭಿನಯಿಸಿದರು. ಪ್ರೊ. ವ್ಹಿ.ಜಿ.ಕುಲಕರ್ಣಿಯವರು ದುರ್ಯೋಧನನ ಪಾತ್ರವನ್ನು ಹಾಗೂ ಇತರ ಪಾತ್ರಗಳಲ್ಲಿ ಲಿಂಗರಾಜ ವಿದ್ಯಾರ್ಥಿಗಳು ತಮ್ಮ ಯೋಗ್ಯತೆಗೆ ಮೀರಿ ಅಭಿನಯಿಸಿದರು. ಈ ನಾಟಕವನ್ನು ವೀಕ್ಷಿಸಿದ ಪ್ರೊ. ಬಿ.ಎಂ.ಶ್ರೀಕಂಠಯ್ಯನವರು ಪ್ರೊ. ವ್ಹಿ.ಜಿ.ಕುಲಕರ್ಣಿಯವರನ್ನು ತಬ್ಬಿಕೊಂಡು ಅಭಿನಂದಿಸಿದರು. ಮುಂದೆ ಈ ನಾಟಕದ ಸಂಕ್ಷಿಪ್ತ ರೂಪಾಂತರ ೧೯೪೯ರ ಫೆಬ್ರುವರಿ ೧೪ ರಂದು ಆಕಾಶವಾಣಿಯಲ್ಲಿ ಪ್ರಸಾರವಾಯಿತು. ಆ ನಾಟಕದಲ್ಲಿ ಪ್ರೊ.ಪಿ.ಕೆ.ಭಾಗೋಜಿಯವರು 'ಸಂಜಯ'ನ ಪಾತ್ರ ನಿರ್ವಹಿಸಿದ್ದರು.

೧೯೩೯ರಲ್ಲಿ ಕೆ.ಎಲ್.ಇ. ಸಂಸ್ಥೆಯವರು ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಹಾಗೂ ಶಿಕ್ಷಕರ ತರಬೇತಿ ಕಾಲೇಜು ಪ್ರಾರಂಭಿಸಿದಾಗ ಅದರ ಉದ್ಘಾಟನೆಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರು ಆಗಮಿಸಿದ್ದರು. ಆಗ ಶ್ರೀ ಕರ್ಕಿ, ಶ್ರೀ ಇಂಚಲರು ಕಾವ್ಯಕ್ಷೇತ್ರದ ಮೂಲಕ ಕನ್ನಡದ ಅಭಿಮಾನ ತುಂಬಿದರೆ ಶ್ರೀ ಬ.ಗಂ.ತುರಮರಿಯವರು ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಹುಟ್ಟು ಹಾಕುತ್ತಿದ್ದರು. ಕನ್ನಡಪರ ಚಳವಳಿ ಮಾಡುವಂತೆ ಪ್ರೋತ್ಸಾಹಿಸುತ್ತಿದ್ದರು. ಅವರ ಗರಡಿಯಲ್ಲಿಯೇ ಬೆಳಗಾವಿಯ ಪ್ರಥಮ ಕನ್ನಡ ಭಾಷಿಕ ಮೇಯರ್ ಶ್ರೀ ಸಿದ್ಧನಗೌಡ ಪಾಟೀಲರು, ಅಣ್ಣಪ್ಪ ಮಟ್ಟೀಕಲ್ಲಿ, ಈಶ್ವರ ಕಲಾದಗಿ, ಜಿ.ಬಿ. ಶೇಳಿ, ಜಿ.ಕೆ. ಟಿಕ್ಕೇದ, ಬಿ.ಎ.ಸನದಿ, ಎಂ. ಅಕಬರಅಲಿ, ಶ್ರೀನಿವಾಸ ಕೋಘಜಾನೆ ಮುಂತಾದವರು ಹೋರಾಟಗಾರರಾಗಿ, ಸಾಹಿತಿಗಳಾಗಿ ರೂಪುಗೊಂಡರು. ಮರಾಠಿಗರ ಕೈಯಲ್ಲಿದ್ದ ಸಾರ್ವಜನಿಕ ವಾಚನಾಲಯವನ್ನು ಒಂದು ಅವಧಿಗೆ ಕನ್ನಡಿಗರ ವಶಕ್ಕೆ ತರುವಲ್ಲಿ ಯಶಸ್ವಿಯಾದರು. ಲಿಂಗರಾಜ ಕಾಲೇಜಿನ ಕರ್ನಾಟಕ ಸಂಘವು ಪ್ರತಿವರ್ಷ ವಾರ್ಷಿಕೋತ್ಸವ ಆಚರಿಸುವದರ ಮೂಲಕ ಇಡೀ ಬೆಳಗಾವಿಯ ಗಮನ ಸೆಳೆಯುತ್ತಿತ್ತು, ಕರ್ನಾಟಕ ಸಂಘದ ಮೂಲಕ ಡಾ. ಆರ್.ಸಿ.ಹಿರೇಮಠ ಡಾ. ಎಂ.ಎಸ್.ಸುಂಕಾಪುರ, ಶ್ರೀ ಶ್ರೀನಿವಾಸ ಕೋಘಜಾನೆ, ಕೆ.ಈಶ್ವರನ್, ಪಿ.ಕೆ.ಭಾಗೋಜಿ ಮುಂತಾದವರು ಖ್ಯಾತ ವಾಗ್ಮಿಗಳಾಗಿ ಹೊರಹೊಮ್ಮಿದರು. ಅದೇ ವರ್ಷ ಬೆಳಗಾವಿಯಲ್ಲಿ ಸರಕಾರಿ ಬಿ.ಎಡ್.ಕಾಲೇಜ ಆರಂಭವಾಯಿತು. ರಾಜಾ ಲಖಮಗೌಡ ಲಾ ಕಾಲೇಜು ಸಹಿತ ಅದೇ ವರ್ಷ ಕರ್ನಾಟಕ ಲಾ ಸೊಸೈಟಿಯವರಿಂದ ಪ್ರಾರಂಭವಾಯಿತು. ಹೀಗೆ ಕನ್ನಡ ಬೆಳಗಾವಿಯಲ್ಲಿ ಕುಡಿಯೊಡೆದು ಪಲ್ಲವಿಸಿ ಚೆಲ್ಲುವರಿಯತೊಡಗಿತು. ೧೯೪೪ರಲ್ಲಿ ಡಾ.ಸಿ.ವ್ಹಿ.ರಾಮನ್‌ರು ಬೆಳಗಾವಿಗೆ ಬಂದು ಲಿಂಗರಾಜ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಉದ್ಘಾಟಿಸಿದರು.

ರಾಜ್ಯ ಪುನರ್‌ವಿಂಗಡಣಾ ಆಯೋಗ (ಎಸ್.ಆರ್.ಸಿ) ಬೆಳಗಾವಿಗೆ ೨೧–೬–೧೯೫೪ ರಂದು ಆಗಮಿಸಿ ಇಲ್ಲಿಯ ನಾಗರಿಕರಿಂದ ಮನವಿ ಸ್ವೀಕರಿಸಿತು. ಆಗ ನಾಗನೂರು ರುದ್ರಾಕ್ಷಿಮಠದ ಲಿಂ.ಶಿವಬಸವಸ್ವಾಮಿಗಳು, ಕೆ.ಎಲ್.ಇ.ಸಂಸ್ಥೆಯವರು, ಕಾಂಗ್ರೆಸ್ ಕಮೀಟಿಯವರು, ಕರ್ನಾಟಕ ಏಕೀಕರಣ ಸಮಿತಿಯ ಬೆಳಗಾವಿ ಶಾಖೆಯವರು, ದಿ.ಡಿ.ವ್ಹಿ.ಬೆಳವಿ ವಕೀಲರು, ದಿ.ಗಂಗಾಧರ ರಾವ್ ದೇಶಪಾಂಡೆ ಮುಂ. ಹಿರಿಯರು ಹಾಗೂ ನೂರಾರು ಸಂಘ ಸಂಸ್ಥೆಗಳು ಕರ್ನಾಟಕದ ಪರವಾಗಿ ಮನವಿ ಸಲ್ಲಿಸಿದವು. ಹಾಗೆ ಮನವಿಗಳನ್ನು ಸಲ್ಲಿಸುವಲ್ಲಿ ಲಿಂಗರಾಜ ಕಾಲೇಜು ಹಾಗೂ ಜಿ.ಎ.ಹೈಸ್ಕೂಲಿನ ಪ್ರಾಧ್ಯಾಪಕರ ಪಾತ್ರ ಮಹತ್ವದ್ದಾಗಿತ್ತು, ಬೆಳಗಾವಿಯ ಮುಸಲ್ಮಾನರು, ಕ್ರಿಶ್ಚಿಯನ್‌ರು, ದಲಿತರು ಮುಂ. ಅಲ್ಪಸಂಖ್ಯಾತರೂ ಸಹಿತ ಬೆಳಗಾವಿ ಕರ್ನಾಟಕದಲ್ಲಿಯೇ ಇರಲಿ ಎಂದು ಹೇಳಿದರು. ಅದೇ ರೀತಿ ಮಹಾಜನ್ ಆಯೋಗದ ಎದುರು ಸಹಿತ ಕೆ.ಎಲ್.ಇ.ಸೊಸೈಟಿಯವರು ಬೆಳಗಾವಿ–ಕರ್ನಾಟಕದ ಅವಿಭಾಜ್ಯ ಅಂಗವೆಂಬುದನ್ನು ದಾಖಲೆ ಸಹಿತ ಮನವಿ ಸಲ್ಲಿಸಿದರು. ಆ ಮೊದಲೆ ಗಡಿಭಾಗಗಳಲ್ಲಿ ಅಂದರೆ ನಿಪ್ಪಾಣಿ–ಚಿಕ್ಕೋಡಿ–ಗೋಕಾಕ–ಅಥಣಿಗಳಲ್ಲಿ ಶಾಲೆ–ಕಾಲೇಜುಗಳನ್ನು ಪ್ರಾರಂಭಿಸಿ ಕನ್ನಡ ವಾತಾವರಣ ನಿರ್ಮಿಸಿದ್ದರು.

ಹೀಗೆ ೧೯೧೬ ರಲ್ಲಿ ಸಾಮಾನ್ಯ ಹಾಗೂ ಅವಕಾಶವಂಚಿತ ವಿದ್ಯಾರ್ಥಿಗಳಿಗಾಗಿಯೇ ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಿ ಅಶಕ್ತವಾಗಿದ್ದ ಕನ್ನಡವನ್ನು ಸಶಕ್ತಗೊಳಿಸಿ ಕನ್ನಡದ ದೀಪ ಹಚ್ಚಿದ ಕೆ.ಎಲ್.ಇ. ಸಂಸ್ಥಾಪಕರನ್ನು ನೆನೆಯುವದೇ ಉದಯ, ಮರೆವೇ ಅಸ್ತಮಾನ!

❑❑

# ಕೆ. ಎಲ್. ಇ. ವಿಶ್ವವಿದ್ಯಾಲಯ, ಬೆಳಗಾವಿ

## ೯ನೇ ಘಟಿಕೋತ್ಸವ ಸಮಾರಂಭ




ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಘಟಿಕೋತ್ಸವವನ್ನು ಉದ್ದೇಶಿಸಿ ಮಾತನಾಡುತ್ತಿರುವುದು.
ಕೆಎಲ್‌ಇ ಕುಲಾಧಿಪತಿ ಡಾ.ಪ್ರಭಾಕರ ಕೋರೆಯವರು ಹಾಗೂ ಕುಲಪತಿ ಡಾ.ವಿವೇಕ ಸಾವೋಜಿ ಅವರು ಉಪಸ್ಥಿತರಿರುವರು.

ಪ್ರಸ್ತುತ ಸಂದರ್ಭದಲ್ಲಿ ಜ್ಞಾನ ಹಾಗೂ ಅಗತ್ಯ ಕೌಶಲಗಳೊಂದಿಗೆ ಪದವಿ ಪಡೆದುಕೊಳ್ಳುತ್ತಿರುವ ಯುವ ಸಮುದಾಯ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವ ಕಾಲ ಬಂದಿದೆ. ಕಠಿಣ ಪರಿಶ್ರಮ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುವ ಮೂಲಕ ವಿದ್ಯಾರ್ಥಿಗಳು ಸಮಾಜ ಹಾಗೂ ಮಾತೃಭೂಮಿ ಹೆಮ್ಮೆಪಡುವ ಸಾಧನೆ ಮಾಡಬೇಕು ಎಂದು ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಹೇಳಿದರು.

ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಜೀರಗೆ ಸಭಾಭವನದಲ್ಲಿ ಗುರುವಾರ ೨೫ ಏಪ್ರಿಲ್ ೨೦೧೯ ರಂದು ಜರುಗಿದ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಆಂಡ್ ರಿಸರ್ಚ್ ಸಂಸ್ಥೆಯ ೯ ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಿ ಮಾತನಾಡಿದರು.

ವೈದ್ಯಕೀಯ ಪದವಿ ಪಡೆದು ವೃತ್ತಿ ಆರಂಭಿಸಲಿರುವ ಯುವ ಸಮುದಾಯ ಸಮಾಜದಲ್ಲಿ ತುಳಿತಕ್ಕೊಳಗಾದ ಜನರಿಗೆ ಅತ್ಯಂತ ಸಹಾನುಭೂತಿಯಿಂದ ಚಿಕಿತ್ಸೆ ನೀಡಬೇಕು. ಅತ್ಯಂತ ಪವಿತ್ರವಾದ ವೈದ್ಯಕೀಯ ವೃತ್ತಿಯನ್ನು ಹಣ ಗಳಿಕೆಯ ಬದಲಾಗಿ ಸಾರ್ವಜನಿಕರ ಸೇವೆಗೆ ಮೀಸಲಿಡಬೇಕು ಎಂದು ಸಲಹೆ ನೀಡಿದರು. ಅತ್ಯುತ್ತಮ ಹಾಗೂ ಗುಣಮಟ್ಟದ ವೈದ್ಯಕೀಯ ಸೇವೆ, ಸೌಲಭ್ಯಗಳು ಸಮಾಜದ ಕಟ್ಟಕಡೆಯ ಸಾಮಾನ್ಯ ವ್ಯಕ್ತಿಗೂ ಕೈಗೆಟುಕುವಂತೆ ಒದಗಿಸಬೇಕು. ವೈದ್ಯಕೀಯ ಕ್ಷೇತ್ರದಲ್ಲಿನ ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯಗಳನ್ನು ಗ್ರಾಮೀಣ ಪ್ರದೇಶಕ್ಕೂ ತಲುಪಿಸುವ ಸವಾಲು ನಮ್ಮ ಮುಂದಿದೆ. ಇದನ್ನು ಯುವ ವೈದ್ಯರು ಆದ್ಯತೆಯ ಮೇರೆಗೆ ಒದಗಿಸಬೇಕು ಎಂದರು.



ಚಿನ್ನದ ಪದಕ ವಿಜೇತರೊಂದಿಗೆ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಕುಲಾಧಿಪತಿ ಡಾ.ಪ್ರಭಾಕರ ಕೋರೆ ಹಾಗೂ ಗಣ್ಯರು.

ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಸರಕಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುತ್ತಿದೆ. ಖಾಸಗಿ ಸಂಸ್ಥೆಗಳು ಇದರೊಂದಿಗೆ ಕೈಜೋಡಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಸೌಲಭ್ಯ ಒದಗಿಸಲು ಮುಂದಾಗಬೇಕಿದೆ. ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಆರೋಗ್ಯ ಕ್ಷೇತ್ರದಲ್ಲಿ ಕ್ಷಿಪ್ರ ಬದಲಾವಣೆ ಕಾಣುತ್ತಿದೆ. ಇದರಿಂದಾಗಿ ಅನೇಕ ಕಾಯಿಲೆಗಳಿಗೆ ಉತ್ತಮ ಚಿಕಿತ್ಸೆ ಲಭಿಸುತ್ತಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಸಮಾಜದಲ್ಲಿ ತುಳಿತಕ್ಕೊಳಗಾದ ಅಥವಾ ಗ್ರಾಮೀಣ ಪ್ರದೇಶದ ಜನರಿಗೆ ಅತ್ಯುತ್ತಮ ವೈದ್ಯಕೀಯ ಸೇವೆ ಒದಗಿಸುವುದು ಕೇವಲ ಸರಕಾರದಿಂದ ಮಾತ್ರ ಸಾಧ್ಯವಿಲ್ಲ. ಆದ್ದರಿಂದ ಖಾಸಗಿಯವರು ಸೇರಿದಂತೆ ಪ್ರತಿಯೊಬ್ಬರೂ ಇದಕ್ಕೆ ಕೈಜೋಡಿಸಬೇಕಿದೆ. ಬದಲಾಗುತ್ತಿರುವ ಜೀವನ ಶೈಲಿಯಿಂದಾಗಿ ದೈಹಿಕ ಶ್ರಮದ ಕೊರತೆಯಿಂದ ಇತ್ತೀಚಿನ ದಿನಗಳಲ್ಲಿ ಅನೇಕ ಬಗೆಯ ಕಾಯಿಲೆಗಳು ಕಂಡುಬರುತ್ತಿವೆ. ಆದ್ದರಿಂದ ಯೋಗ ಸೇರಿದಂತೆ ಇತರೆ ದೈಹಿಕಶ್ರಮದ ಕಡೆಗೆ ಒತ್ತು ನೀಡುವಂತೆ ತಿಳಿಸಿದರು.

ಪಾಶ್ಚಿಮಾತ್ಯ ಜೀವನಶೈಲಿಯ ಅನುಕರಣೆಯಿಂದ ದೇಶಿಯ ಆಹಾರ ಪದ್ಧತಿಯನ್ನು ನಿರ್ಲಕ್ಷಿಸುತ್ತಿರುವುದರಿಂದ ಮಕ್ಕಳು, ಯುವಕರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ನಮ್ಮ ಸಂಸ್ಕೃತಿಯ ಭಾಗವಾಗಿರುವ ರಾಗಿ ಮುದ್ದೆ, ಜೋಳದ ರೊಟ್ಟಿಯಿಂದ ಆರೋಗ್ಯಯುತ ಬದುಕು ನಮ್ಮದಾಗಿಸಿಕೊಳ್ಳಬೇಕು. ಸ್ವಚ್ಛಭಾರತ ಎಂಬುದು ಕೇವಲ ಸರಕಾರ ಅಥವಾ ಯಾವುದೇ ಪಕ್ಷದ ಕಾರ್ಯಕ್ರಮವಲ್ಲ. ಇದು ಸಾಮಾಜಿಕ ಕಾರ್ಯಕ್ರಮವಾಗಿದೆ. ನಾವೆಲ್ಲರೂ ಅದರಲ್ಲೂ ವಿಶೇಷವಾಗಿ ಯುವ ಸಮುದಾಯ ಇದಕ್ಕೆ ಸಹಕರಿಸಬೇಕು ಎಂದು ಹೇಳಿದರು. ಕನ್ನಡದಲ್ಲಿಯೇ ಮಾತು ಆರಂಭಿಸಿದ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು, ನಾಲ್ಕು ದಶಕದಿಂದ ಕರ್ನಾಟಕದೊಂದಿಗೆ ಸಂಬಂಧ ಇದೆ. ಇಲ್ಲಿ ತುಂಬಾ ಸಂತೋಷದಿಂದ ಆಗಮಿಸಿದ್ದೇನೆ. ಬೆಳಗಾವಿಯನ್ನು ವೈಯಕ್ತಿಕವಾಗಿ ಬಹಳ ಪ್ರೀತಿಸುತ್ತೇನೆ. ಈ ನೆಲದ ಪರಿಸರ, ಆಹಾರ, ಪರಂಪರೆ ಸುಂದರವಾಗಿದೆ ಎಂದು ಬಣ್ಣಿಸಿದರು.

ಭಾಷೆ ಮತ್ತು ಭಾವನೆಗಳು ಒಟ್ಟೊಟ್ಟಿಗೆ ಸಾಗುತ್ತವೆ. ಆದ್ದರಿಂದ ಮಾತೃಭಾಷೆ ಬಗ್ಗೆ ಪ್ರತಿಯೊಬ್ಬರೂ ಅಭಿಮಾನ ಬೆಳೆಸಿಕೊಳ್ಳಬೇಕು. ಇತರೆ ಭಾಷೆಗಳು ಅನಿವಾರ್ಯ. ಆದರೆ ನಮ್ಮ ಮಾತೃಭಾಷೆ ನಮ್ಮ ಅಭಿಮಾನವಾಗಬೇಕು. ತಂದೆ-ತಾಯಿ, ಮಾತೃಭಾಷೆ, ಮಾತೃಭೂಮಿ ಮತ್ತು ಗುರುಗಳನ್ನು ಗೌರವಿಸುವುದು ಎಲ್ಲರ ಕರ್ತವ್ಯವಾಗಿದೆ. ತಮ್ಮ ತಮ್ಮ ಕರ್ತವ್ಯ ನಿರ್ವಹಿಸುವುದೇ ನಿಜವಾದ ದೇಶಭಕ್ತಿಯಾಗಿದೆ ಎಂದರು.

ಕೆಎಲ್ಇ ವಿಶ್ವವಿದ್ಯಾನಿಲಯದ ಕುಲಾಧಿಪತಿಯೂ ಆಗಿರುವ ರಾಜ್ಯಸಭಾ ಸದಸ್ಯ ಡಾ.ಪ್ರಭಾಕರ ಕೋರೆ, ಕುಲಪತಿ ಡಾ.ವಿವೇಕ ಸಾವೋಜಿ, ಕುಲಸಚಿವ ಡಾ.ವಿ.ಡಿ.ಪಾಟೀಲ ಹಾಗೂ ವಿವಿಧ ವಿಭಾಗಗಳ ಡೀನ್‌ಗಳು ಉಪಸ್ಥಿತರಿದ್ದರು. ವಿವಿಧ ವಿಭಾಗದಲ್ಲಿ ಒಟ್ಟಾರೆ ೨೩ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

# ಬೆಂಗಳೂರಿನ ರಾಜಾಜಿನಗರದಲ್ಲಿ ಕೆ.ಎಲ್.ಇ. ಬ್ಯಾನಿಯನ್ ನೂತನ ಶಾಲೆಯ ಉದ್ಘಾಟನೆ




ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಿರುವ ರಾಜ್ಯಸಭಾ ಸದಸ್ಯರಾದ ಡಾ.ಪ್ರಭಾಕರ ಕೋರೆ, ಶಾಸಕರು ಹಾಗೂ ಮಾಜಿ ಸಚಿವರಾದ ಎಸ್. ಸುರೇಶಕುಮಾರ, ವಿ.ಸೋಮಣ್ಣ, ಕೆಎಲ್‌ಇ ಅಧ್ಯಕ್ಷರಾದ ಶಿವಾನಂದ ಕೌಜಲಗಿ ಹಾಗೂ ಗಣ್ಯರು ಉಪಸ್ಥಿತರಿದ್ದರು.

ಕೆಎಲ್‌ಇ ಸಪ್ತರ್ಷಿಗಳ ತ್ಯಾಗದ ಫಲವಾಗಿ ಬೆಳೆದಿರುವ ಸಂಸ್ಥೆ ಇಂದು ಜಾಗತಿಕ ಮನ್ನಣೆಗೆ ಪಾತ್ರವಾಗಿದ್ದು ಹೆಮ್ಮೆಯನ್ನುಂಟು ಮಾಡಿದೆ ಎಂದು ಶಾಸಕರು ಹಾಗೂ ಮಾಜಿ ಸಚಿವರಾದ ಎಸ್. ಸುರೇಶಕುಮಾರ ಅವರು ನುಡಿದರು. ಬೆಂಗಳೂರಿನ ರಾಜಾಜಿನಗರದಲ್ಲಿ ನೂತನವಾಗಿ ಪ್ರಾರಂಭಗೊಂಡಿರುವ ಕೆಎಲ್‌ಇ ದಿ ಬ್ಯಾನಿಯನ್ ಶಾಲೆಯನ್ನು ದಿನಾಂಕ ೦೮.೦೬.೨೦೧೯ ರಂದು ಉದ್ಘಾಟಿಸಿ ಮಾತನಾಡಿದರು.

ಸಪ್ತರ್ಷಿಗಳು ಕೆಎಲ್‌ಇ ಸಂಸ್ಥೆಯನ್ನು ಹುಟ್ಟುಹಾಕಿದರೆ ಡಾ.ಪ್ರಭಾಕರ ಕೋರೆಯವರು ಸಂಸ್ಥೆಯನ್ನು ಹೆಮ್ಮರವನ್ನಾಗಿಸಿದರು. ಇಂದು ಸಂಸ್ಥೆ ಶಿಕ್ಷಣ ಹಾಗೂ ಆರೋಗ್ಯ ಎಲ್ಲ ಕ್ಷೇತ್ರಗಳಲ್ಲಿ ವಿಸ್ತಾರಗೊಂಡಿದೆ. ನವನವೀನವಾದ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕುವ ಮೂಲಕ ಇಂದಿನ ಬೇಡಿಕೆಗಳಿಗೆ ಸ್ಪಂದಿಸುತ್ತಿರುವುದು ಹೆಮ್ಮೆಯನ್ನುಂಟು ಮಾಡಿದೆ. ದೇಶದ ಪ್ರಧಾನಿಗಳಾದ ಶ್ರೀ ನರೇಂದ್ರ ಮೋದಿಯವರು ಈ ಸಂಸ್ಥೆಗೆ ಭೇಟಿ ನೀಡಿ, ಬೆಳವಣಿಗೆಯನ್ನು ಕಂಡು ಅಭಿನಂದಿಸಿರುವುದು ಇದಕ್ಕೆ ಸಾಕ್ಷಿ. ಇಂತಹ ಸಂಸ್ಥೆಯಲ್ಲಿ ಮಕ್ಕಳು ಕಲಿಯುವುದೇ ಒಂದು ಸೌಭಾಗ್ಯ. ಡಾ.ಕೋರೆಯವರು ಸಂಸ್ಥೆಯ ಮೂಲಕ ಎಲ್ಲವನ್ನು ಸಾಧಿಸಿ ತೋರಿಸಿದ್ದಾರೆ. ಅವರ ಕೊಡುಗೆ ಅಪಾರ ಹಾಗೂ ಅನನ್ಯವೆನಿಸಿದೆ. ದೇಶದ ಬೆಳವಣಿಗೆಯಲ್ಲಿ ತನ್ನದೇ ವಿಶಿಷ್ಟ ಕೊಡುಗೆ ನೀಡುತ್ತಿರುವ ಕೆಎಲ್‌ಇ ಸಂಸ್ಥೆಯ ವಿದ್ಯಾರ್ಥಿಗಳು ಭವಿಷ್ಯತ್ತಿನಲ್ಲಿ ನೋಬೆಲ್ ಪ್ರಶಸ್ತಿಗೆ ಭಾಜನರಾಗಲೆಂದು ಶುಭಹಾರೈಸಿದರು. ಅದೇ ತಾನೇ ಪುಟ್ಟ ಹೆಜ್ಜೆಗಳಿಡುವ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ದಿ ಬ್ಯಾನಿಯನ್ ಶಾಲೆಯು ಮೂಲಾಧಾರವಾಗಲಿದೆ. ಈ ನೆಲೆಯಲ್ಲಿ ಡಾ.ಪ್ರಭಾಕರ ಕೋರೆ ಅವರ ತಂಡ ಹಲವಾರು ಸೌಲಭ್ಯಗಳನ್ನು ಈ ಶಾಲೆಯಲ್ಲಿ ಒದಗಿಸಿರುವುದು ನನಗೆ ಸಂತೋಷವೆನಿಸಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ಮಹಾನಗರ ಪಾಲಿಕೆ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ ಅವರು ಮಾತನಾಡುತ್ತ, ವಿಶೇಷ ಕಾಳಜಿಯಿಂದ ನಿರ್ಮಾಣಗೊಂಡಿರುವ ಈ ಶಾಲೆ ಪುಟ್ಟ ಮಕ್ಕಳ ಭವಿಷ್ಯಕ್ಕೆ ಅತ್ಯುತ್ತಮವಾದ ಮುನ್ನುಡಿ ಬರೆಯಲಿದೆ. ಕೆಎಲ್ಇ ಸಂಸ್ಥೆ ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದ್ದು, ಬೆಂಗಳೂರಿನಲ್ಲಿ ಮತ್ತೊಂದು ಗರಿಯನ್ನು ಮೂಡಿಸಿರುವುದು ಹೆಮ್ಮೆಯನ್ನುಂಟು ಮಾಡಿದೆ ಎಂದು ಹೇಳಿದರು.

ಗೌರವ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ಸೆಂಟ್ರಲ್ ಸಂಸದರಾದ ಪಿ.ಸಿ.ಮೋಹನ ಅವರು ಮಾತನಾಡುತ್ತ, ಕೆಎಲ್ಇ ಸಂಸ್ಥೆಯು ಶತಮಾನೋತ್ಸವವನ್ನು ಆಚರಿಸಿಕೊಂಡಿದೆ. ದೇಶದ ಹೆಮ್ಮೆಯ ಸಂಸ್ಥೆಯಾಗಿರುವ ಕೆಎಲ್ಇ ವಿದ್ಯಾರ್ಥಿಗಳ ಶೈಕ್ಷಣಿಕ ಹಸಿವನ್ನು ನೀಗಿಸಿರುವುದು ಅಭಿನಂದನೀಯ. ಭವಿಷ್ಯತ್ತಿನಲ್ಲಿಯೂ ತನ್ನ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಮಹತ್ವದ ಹೆಜ್ಜೆ ಇಡಲಿದೆ ಎಂದು ಡಾ.ಕೋರೆಯವರಿಗೆ ಶುಭ ಹಾರೈಸಿದರು.

ಇನ್ನೋರ್ವ ಗೌರವ ಅತಿಥಿ, ಮಾಜಿ ಸಚಿವರು ಹಾಗೂ ಶಾಸಕರಾದ ವಿ.ಸೋಮಣ್ಣ ಅವರು ಮಾತನಾಡುತ್ತ, ಕೆಎಲ್ಇ ಸಂಸ್ಥೆಗೂ ನನಗೂ ೪೦ ವರ್ಷಗಳ ಸಂಬಂಧವಿದೆ. ಡಾ.ಕೋರೆಯವರನ್ನು ಅಷ್ಟೆ ಹತ್ತಿರದಿಂದ ನಾನು ನೋಡುತ್ತ ಬಂದಿದ್ದೇನೆ. ಜಾಗತಿಕ ಮಟ್ಟದಲ್ಲಿ ಹಲವಾರು ದಾಖಲೆಗಳನ್ನು ಸೃಷ್ಟಿಸಿರುವ ಕೆಎಲ್ಇ ಇಂದು ಮತ್ತಷ್ಟು ವಿಸ್ತರಿಸುತ್ತಿರುವುದು ನನಗೆ ಅಭಿಮಾನ ಹೆಚ್ಚಿಸಿದೆ. ಪುಟ್ಟ ಮಕ್ಕಳಿಂದ ಉನ್ನತ ಶಿಕ್ಷಣದವರೆಗೆ ಕೆಎಲ್ಇ ಆಲೋಚಿಸುತ್ತಿರುವುದು ವಿಶೇಷವೆನ್ನಬೇಕು. ಈ ನಿಟ್ಟಿನಲ್ಲಿ ಕೆಎಲ್ಇಯ ಎಲ್ಲ ಪದಾಧಿಕಾರಿಗಳು ಅಭಿನಂದನಾರ್ಹರು ಎಂದು ಹೇಳಿದರು.

ಸ್ವಾಗತಪರ ಮಾತುಗಳನ್ನಾಡಿದ ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆಯವರು, ೧೯೧೬ರಲ್ಲಿ ಏಳು ಜನ ಶಿಕ್ಷಕರಿಂದ ಪ್ರಾರಂಭಗೊಂಡ ಕೆ.ಎಲ್.ಇ.ಸಂಸ್ಥೆ ಇಂದು ಜಾಗತಿಕವಾಗಿ ಬೆಳೆದುನಿಂತಿದೆ. ೨೫೯ ಅಂಗಸಂಸ್ಥೆಗಳನ್ನು ೧,೨೫,೦೦೦ ವಿದ್ಯಾರ್ಥಿಗಳನ್ನು, ೧೬,೦೦೦ ಸಿಬ್ಬಂದಿ ವರ್ಗದವರನ್ನು ಹೊಂದಿರುವ ಬೃಹತ್ ಶಿಕ್ಷಣ ಸಂಸ್ಥೆಗಳಲ್ಲಿ ಒಂದೆಂಬ ಅಭಿದಾನಕ್ಕೆ ಪಾತ್ರವಾಗಿದೆ. ಕೆ.ಎಲ್.ಇ. ಸಂಸ್ಥೆಯು ೧೦೩ ವರ್ಷಗಳಿಂದ ಯಶಸ್ವಿಯಾಗಿ ಮುನ್ನಡೆದಿದೆ. ಸಂಸ್ಥಾಪಕರ ಪುಣ್ಯದ ಫಲವೆನ್ನುವಂತೆ ಸಂಸ್ಥೆ ಇಂದು ಗಮನಾರ್ಹ ಸಾಧನೆ ಮಾಡಿ ಅಭಿಮಾನದಿಂದ ತಲೆ ಎತ್ತಿದೆ, ಗ್ರಾಮೀಣ ಭಾಗದ ಹಾಗೂ ಗಡಿಭಾಗದ ರೈತ ಮಕ್ಕಳ ಕಲ್ಯಾಣಕ್ಕೆ ನಾಂದಿಹಾಡಿದೆ. ಶತಮಾನೋತ್ಸವ ಆಚರಿಸಿಕೊಂಡಿರುವ ಕೆ.ಎಲ್.ಇ.ಸಂಸ್ಥೆ ಜಗತ್ತಿನಲ್ಲಿ ನೂರುವರ್ಷಗಳನ್ನು ಪೂರೈಸಿರುವ ಕೆಲವೇ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಒಂದೆಂಬುವುದು ನಮಗೆ ಹಾಗೂ ದೇಶಕ್ಕೆ ಹೆಮ್ಮೆಯ ಸಂಗತಿ. ಅದರಲ್ಲಿಯೂ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೇವೆಯಿಂದ ಮುಂಚೂಣಿಯಲ್ಲಿರುವುದು ನಮ್ಮ ಕೆ.ಎಲ್.ಇ.ಸಂಸ್ಥೆ ಎಂಬುದು ಅಭಿಮಾನದ, ಗೌರವದ ವಿಚಾರವೆಂಬುದನ್ನು ನಾನು ಎದೆತುಂಬಿ ಹೇಳುತ್ತೇನೆ. ಕೆಎಲ್ಇ ತನ್ನ ಶಿಕ್ಷಣ–ಆರೋಗ್ಯ– ಸಂಶೋಧನೆ ಕ್ಷೇತ್ರದಲ್ಲಿ ಜಾಗತಿಕ ಮನ್ನಣೆ ಗಳಿಸಿದೆ. ಅಸಾಧ್ಯವಾದುದನ್ನು ಸಾಧಿಸಿ ದೇಶ ಕಟ್ಟುವ, ಸಮಾಜ ನಿರ್ಮಾಣ ಮಾಡುವ ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ, ಶ್ರೀ ಶಿವಾನಂದ ಕೌಜಲಗಿ ಅವರು ಸಂಸ್ಥೆಯ ಬೆಳವಣಿಗೆಯ ಕುರಿತು ಹೇಳುತ್ತ ಕೆಎಲ್ಇ ದಾನಿಗಳನ್ನು ಸ್ಮರಿಸಿದರು. ಇದೇ ಸಂದರ್ಭದಲ್ಲಿ ಕೆ.ಎಲ್.ಇ. ಸಂಸ್ಥೆಯ ಉಪಾಧ್ಯಕ್ಷರುಗಳು, ಉಪಕಾರ್ಯಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಆಜೀವ ಸದಸ್ಯರು ಹಾಗೂ ಕಾರ್ಯದರ್ಶಿ ಡಾ.ಬಿ.ಜಿ.ದೇಸಾಯಿ ಅವರು ಉಪಸ್ಥಿತರಿದ್ದರು. ದಿ ಬ್ಯಾನಿಯನ್ ಶಾಲೆಯ ಸೆಂಟರ್ ಹೆಡ್‌ರಾದ ಶ್ರೀಮತಿ ಉಮಾದೇವಿ ವಂದಿಸಿದರು. ಶ್ರೀಮತಿ ಮಂಜುಳಾ ಅವರು ನಿರೂಪಿಸಿದರು.

# ಡಾ.ಪ್ರಭಾಕರ ಕೋರೆಯವರಿಗೆ ನವಭಾರತ ಹಿಂದಿ ಪತ್ರಿಕೆಯ ಜೀವಮಾನ ಸಾಧನೆ ಪ್ರಶಸ್ತಿ



ಡಾ. ಪ್ರಭಾಕರ ಕೋರೆಯವರಿಗೆ ಪ್ರಶಸ್ತಿ ಪ್ರದಾನ ಮಾಡುತ್ತಿರುವ ಮಹಾರಾಷ್ಟ್ರದ ಶಿಕ್ಷಣ ಸಚಿವರಾದ ವಿನೋದ ತವಡೆ ಹಾಗೂ ಗಣ್ಯರು.

ರಾಜ್ಯಸಭಾ ಸದಸ್ಯ ಹಾಗೂ ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆಯವರಿಗೆ ಮೇ ತಿಂಗಳಿನಲ್ಲಿ ಮುಂಬಯಿ ತಾಜದಲ್ಲಿ ಜರುಗಿದ ಭವ್ಯ ಸಮಾರಂಭದಲ್ಲಿ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಮೌಲಿಕ ಕೊಡುಗೆಯನ್ನು ಪರಿಗಣಿಸಿ ನವಭಾರತ ಹಿಂದಿ ರಾಷ್ಟ್ರೀಯ ಪತ್ರಿಕೆಯು ತನ್ನ ೮೫ನೇ ವಾರ್ಷಿಕೋತ್ಸವ ಹಾಗೂ ೫ನೇ ನವಭಾರತ ಶಿಕ್ಷಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಡಾ.ಪ್ರಭಾಕರ ಕೋರೆಯವರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿತು ಗೌರವಿಸಲಾಯಿತು.

ಮಹಾರಾಷ್ಟ್ರದ ಶಿಕ್ಷಣ ಸಚಿವರಾದ ವಿನೋದ ತವಡೆ ಅವರು ಡಾ.ಪ್ರಭಾಕರ ಕೋರೆಯವರಿಗೆ ಪ್ರಶಸ್ತಿಯನ್ನು ನೀಡಿ ಸತ್ಕರಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರಮಟ್ಟದ ಹಲವಾರು ಶಿಕ್ಷಣ ತಜ್ಞರು ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ಈ ಪ್ರತಿಷ್ಠಿತ ಪ್ರಶಸ್ತಿಗೆ ಪುರಸ್ಕೃತರಾಗಿರುವ ಡಾ.ಪ್ರಭಾಕರ ಕೋರೆಯವರಿಗೆ ಕೆಎಲ್ಇ ಸಂಸ್ಥೆಯ ಸಮಸ್ತ ಆಡಳಿತ ಮಂಡಳಿಯು ಅಭಿನಂದನೆಗಳನ್ನು ಸಲ್ಲಿಸಿದೆ.

# ಸಿ. ಬಿ. ಕೋರೆ ಪಾಲಿಟೆಕ್ನಿಕ್ ಕಾಲೇಜ, ಚಿಕ್ಕೋಡಿ

## ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ




ಮುಂದಿನ ದಿನಮಾನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಡಲಿದ್ದು, ಜಲಮೂಲಗಳು ಉಳಿಯುವ ಹಾಗೇ ಯುವಕರಲ್ಲಿ ಜಾಗೃತಿ ಮೂಡಿಸಬೇಕಾದ ಅವಶ್ಯಕತೆ ಇದೆ. ಇದರ ಜೊತೆಗೆ ಗ್ರಾಮೀಣ ಹಾಗೂ ನಗರದ ಪ್ರದೇಶಗಳ ಯುವಕ–ಯುವತಿಯರಿಗೆ ತಕ್ಕ ಶಿಕ್ಷಣದ ಜೊತೆಗೆ ಉದ್ಯೋಗ ಸಿಗಬೇಕಿರುವುದು ಅಗತ್ಯ ಎಂದು ರಾಜ್ಯಸಭೆ ಸದಸ್ಯ ಡಾ.ಪ್ರಭಾಕರ ಕೋರೆ ಹೇಳಿದರು.

೧೧.೬.೨೦೧೯ ರಂದು ಚಿಕ್ಕೋಡಿಯ ಕೆಎಲ್ಇ ಸಿ.ಬಿ.ಕೋರೆ ಪಾಲಿಟೆಕ್ನಿಕ್ ಕಾಲೇಜು ಹಮ್ಮಿಕೊಂಡ ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು. ಇದೀಗ ನಡೆದಿರುವ ರಾಜ್ಯಮಟ್ಟದ ಉದ್ಯೋಗ ಮೇಳ ಶಿಕ್ಷಣ ಕ್ರಾಂತಿಯಲ್ಲಿನ ಐತಿಹಾಸಿಕ ಸಂದರ್ಭವಾಗಿದ್ದು, ಇದರಿಂದ ಗ್ರಾಮೀಣ ಭಾಗದ ಯುವಕ–ಯುವತಿಯರಿಗೆ ಹೆಚ್ಚಿನ ಉದ್ಯೋಗ ದೊರೆಯಲಿದೆ ಎಂದರು.

ಇಂದಿನ ಆಧುನಿಕ ಯುಗದಲ್ಲಿ ಶಿಕ್ಷಣದ ಜೊತೆಗೆ ತಂತ್ರಜ್ಞಾನ ಅರಿವು ವಿದ್ಯಾರ್ಥಿಗಳಿಗೆ ಅವಶ್ಯಕವಾಗಿದೆ. ಇಂದಿನ ಯುವಕರು ಮುಂದಿನ ನಾಗರಿಕರು, ಸ್ವಚ್ಛತೆ ಕಾಪಾಡಿ ಪರಿಸರದ ಕಾಳಜಿ ವಹಿಸಬೇಕಾಗಿದೆ. ದಿನಕಳೆದಂತೆ ನೀರಿನ ಜಲಮೂಲಗಳು ಕಡಿಮೆ ಆಗುತ್ತಿವೆ. ಹೀಗಾಗಿ ನದಿ ಉಳಿಯಲು ನದಿಯಲ್ಲಿ ಸ್ವಚ್ಛತೆ ಕಾಪಾಡಬೇಕಾಗಿದೆ. ಪ್ರಜ್ಞಾವಂತರೇ ಮೂಢನಂಬಿಕೆಗೆ ಅಂಟಿಕೊಂಡು ನದಿಯಲ್ಲಿ ಲಿಂಬೆ, ಹೋಳಿಗೆ ಹಾಗೂ ಅರಿವೆ ಹಾಕುವ ಮೂಲಕ ನೀರನ್ನು ಕಲುಷಿತಗೊಳಿಸುವುದು ಸಮಂಜಸವಲ್ಲ. ಎಲ್ಲರೂ ಮೂಢನಂಬಿಕೆ ಹೋಗಲಾಡಿಸಿ ನದಿ ಸ್ವಚ್ಛತೆಗೆ ಪಣ ತೊಡಬೇಕು ಎಂದರು.

ವಿಧಾನ ಪರಿಷತ್ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಅಂಕ ಸಾಧನೆಗಾಗಿ ಮಾತ್ರ ಶಿಕ್ಷಣ ಪಡೆಯದೆ ಪ್ರಾಯೋಗಿಕತೆಗೆ ಹೆಚ್ಚು ಮಹತ್ವ ನೀಡಿದರೇ ಜೀವನದಲ್ಲಿ ಕಂಡ ಕನಸು ಸಾಕಾರಗೊಳ್ಳಲು ಸಾಧ್ಯ ಎಂದರು. ದಿವ್ಯಸಾನ್ನಿಧ್ಯ ವಹಿಸಿದ್ದ ಚಿಕ್ಕೋಡಿ ಸಂಪಾದನಾ ಸ್ವಾಮಿಗಳು ಆಶೀರ್ವಚನ ನೀಡಿದರು. ಅಧ್ಯಕ್ಷತೆಯನ್ನು ಕೆಎಲ್ಇ ನಿರ್ದೇಶಕರಾದ ಬಸವರಾಜ ಪಾಟೀಲ್ ವಹಿಸಿದ್ದರು. ಪ್ರಾಚಾರ್ಯ ಡಾ. ಎಂ.ಟಿ.ಕುರಣಿ, ಡಾ. ಪ್ರಸಾದ ರಾಂಪೂರೆ, ವಿವೇಕ ಪೋತ, ಎಸ್.ಎಸ್.ಸೊಲ್ಲಾಪುರೆ ಮುಂತಾದವರು ಉಪಸ್ಥಿತರಿದ್ದರು. ಪ್ರಾಚಾರ್ಯ ಸಂದೀಪ ಕ್ಯಾತನವರ ಸ್ವಾಗತಿಸಿದರು. ಆರ್. ಎಸ್. ಮೈಶಾಳೆ ಪರಿಚಯಿಸಿದರು. ಪೂಜಾ ಮಾಳಿ ನಿರೂಪಿಸಿದರು. ಸ್ವಾತಿ ಚಿಕಾಡೆ ವಂದಿಸಿದರು. ಈ ಉದ್ಯೋಗ ಮೇಳದಲ್ಲಿ ನೆರೆಯ ಮಹಾರಾಷ್ಟ್ರ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಯುವಕ–ಯುವಕರು ಆಗಮಿಸಿದ್ದರು. ಸುಮಾರು ೧೬೦೦ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಹೆಸರು ನೊಂದಾಯಿಸಿದರೆ, ೨೦೦೦ ವಿದ್ಯಾರ್ಥಿಗಳು ಮೂಲ ದಾಖಲೆಗಳೊಂದಿಗೆ ನೇರವಾಗಿ ಆಗಮಿಸಿದ್ದರು. ಉದ್ಯೋಗ ಮೇಳದಲ್ಲಿ ಕರ್ನಾಟಕ–ಮಹಾರಾಷ್ಟ್ರದ ಪ್ರತಿಷ್ಠಿತ ೬೦ ಕಂಪನಿಗಳು ಭಾಗವಹಿಸಿದ್ದವು.

# ರಾಜಾ ಲಖಮಗೌಡ ಸ್ವಾಯತ್ತ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜನಪದ ಉತ್ಸವ



ಜನಪದ ಉತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಿರುವ ರಾಜ್ಯಸಭಾ ಸದಸ್ಯರಾದ ಡಾ. ಪ್ರಭಾಕರ ಕೋರೆ.

ಜನಪದ ಕಲೆ ನಮ್ಮ ನಾಡಿನ ಜೀವನಾಡಿಯಾಗಿದೆ. ಅದನ್ನು ಪೋಷಿಸಿ ಬೆಳೆಸಬೇಕಾಗಿರುವುದು ಯುವಜನತೆಯ ಆದ್ಯ ಕರ್ತವ್ಯವೆಂದು ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷರು ಹಾಗೂ ರಾಜ್ಯಸಭಾ ಸದಸ್ಯರಾದ ಡಾ.ಪ್ರಭಾಕರ ಕೋರೆಯವರು ಹೇಳಿದರು. ಅವರು ಕೆಎಲ್ಇ ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜನಪದ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದು ಜನಪದ ಕಲೆ ಅಳಿವಿನ ಅಂಚಿಗೆ ಬಂದಿದೆ. ನಾವು ಪಾಶ್ಚಾತ್ಯ ಬದುಕಿಗೆ ಮಾರುಹೋಗಿ ಗ್ರಾಮೀಣ ಬದುಕಿನಿಂದ ದೂರ ಸರಿಯುತ್ತಿರುವದು ಖೇದಕರ ಸಂಗತಿ. ಯುವಜನತೆಯು ನಮ್ಮ ಸಂಸ್ಕೃತಿಯನ್ನು ಪ್ರೀತಿಸಬೇಕು. ನಮ್ಮ ಕಲೆಯನ್ನು ಆರಾಧಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಜನಪದ ನೃತ್ಯ, ಗೀತೆ, ಉಡಿಗೆ–ತೊಡಿಗೆಯೊಂದಿಗೆ ಜನಪದೋತ್ಸವ ರಂಗೇರಿತು. ಜೋಡೆತ್ತಿನಲ್ಲಿ ಭವ್ಯ ಮೆರವಣಿಗೆಯು ಸಾಗಿತು. ವಿದ್ಯಾರ್ಥಿಗಳು ಬಗೆ ಬಗೆಯ ಹಾಗೂ ವಿವಿಧ ಜನಪದ ಆಹಾರಗಳ ಮಳಿಗೆಗಳನ್ನು ತೆರೆಯುವ ಮೂಲಕ ಸಂಭ್ರಮಿಸಿದರು. ಪ್ರಾಚಾರ್ಯರಾದ ಡಾ. ವಿಘ್ನೇಶ್ವರ ಯಳಮಲಿ, ಡಾ. ಆರ್. ಎಂ. ಪಾಟೀಲ, ಪ್ರೊ. ನಂಜಪ್ಪನವರ ಸಿಬ್ಬಂದಿವರ್ಗದವರು ಜನಪದ ತೊಡಿಗೆಗಳಲ್ಲಿ ಮಿಂಚಿದರು. ಪ್ರೊ.ಶಶಿಧರ ತಾರದಾಳೆ ಕಾರ್ಯಕ್ರಮ ನಿರೂಪಿಸಿದರು.

❑❑

# ಗಣಿತಶಾಸ್ತ್ರ ಹಾಗೂ ಸಂಖ್ಯಾಶಾಸ್ತ್ರದ ಅಂತರಾಷ್ಟ್ರೀಯ ಸಮ್ಮೇಳನ



ಸಮ್ಮೇಳನವನ್ನು ಉದ್ಘಾಟಿಸುತ್ತಿರುವ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರು ಹಾಗೂ ರಾಜ್ಯಸಭಾ ಸದಸ್ಯರಾದ ಡಾ. ಪ್ರಭಾಕರ ಬಿ. ಕೋರೆ. ಈ ಸಂದರ್ಭದಲ್ಲಿ ಕುಲಪತಿ ಡಾ. ವಿವೇಕ ಸಾವೋಜಿ, ಡಾ. ವ್ಹಿ. ಶ್ರೀನಿವಾಸ, ಕುಲಪತಿ ಡಾ. ಶಿವಾನಂದ ಬಿ. ಹೊಸಮನಿ ಹಾಗೂ ಡಾ.ವ್ಹಿ.ಡಿ. ಯಳಮಲಿ ಉಪಸ್ಥಿತರಿದ್ದರು.

ಬೆಳಗಾವಿ ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಸ್ವಾಯತ್ತ ಮಹಾವಿದ್ಯಾಲಯದಲ್ಲಿ ಗಣಿತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ ವಿಭಾಗ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸಹಯೋಗದಲ್ಲಿ "ಗಣಿತಶಾಸ್ತ್ರದಲ್ಲಿ ಇತ್ತೀಚಿನ ಬೆಳವಣಿಗೆಗಳು" ಎಂಬ ವಿಷಯ ಕುರಿತು ಅಂತರಾಷ್ಟ್ರೀಯ ಸಮ್ಮೇಳನವು ಬೆಳಗಾವಿ ಜೆಎನ್‌ಎಂಸಿ ಆವರಣದ ಕೆ.ಎಲ್.ಇ. ಶತಮಾನೋತ್ಸವ ಸಭಾಗೃಹದಲ್ಲಿ ಡಾ.ಪ್ರಭಾಕರ ಕೋರೆಯವರು ಉದ್ಘಾಟಿಸಿದರು.

ಈ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು ಇಂತಹ ಕಾರ್ಯಾಗಾರಗಳು ಅರ್ಥಪೂರ್ಣವಾಗಿ ಜರುಗಬೇಕು. ಅಧ್ಯಾಪಕರು ಹೊಸ–ಹೊಸ ವಿಷಯ ಪರಿಚಯ ಹಾಗೂ ಅಧ್ಯಯನ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಮುಟ್ಟುವಂತೆ ಮಾಡಬೇಕು. ಸಂಶೋಧನೆಗಳಿಗೆ ನಾವು ಹೆಚ್ಚಿನ ಒತ್ತು ನೀಡಿದರೆ ಮಾತ್ರ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವೆಂದು ತಿಳಿಸಿದರು.

ಈ ಸಮಾರಂಭದ ಮುಖ್ಯ ಅತಿಥಿಗಳು ಮುಂಬೈನ (ಎನ್‌ಬಿಎಚ್‌ಎಮ್) ರಾಷ್ಟ್ರೀಯ ಉನ್ನತ ಗಣಿತ ಮಂಡಳಿಯ ಅಧ್ಯಕ್ಷರಾದ ಪ್ರೊ. ವಿ. ಶ್ರೀನಿವಾಸ ಮಾತನಾಡುತ್ತ, ಕೆ.ಎಲ್.ಇ. ಸಂಸ್ಥೆಯು ಪ್ರಸ್ತುತ ಸಂದರ್ಭದಲ್ಲಿ ಜಾಗತಿಕ ಶಿಕ್ಷಣ ನೀಡುವ ಕೇಂದ್ರವಾಗಿದೆ. ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣ ಪಡೆಯಲಿಕ್ಕೆ ಇಂತಹ ಸಮ್ಮೇಳನಗಳು ನಿರಂತರ ಜರುಗಬೇಕು. ಜಾಗತೀಕರಣ ಸಂದರ್ಭದಲ್ಲಿ ಗಣಿತ ವಿಷಯದಲ್ಲಿ ಹೆಚ್ಚೆಚ್ಚು ಮಹತ್ವದ ಸಂಶೋಧನೆಗಳು ನಡೆಯಬೇಕೆಂದು ಕರೆನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬೆಳಗಾವಿ ಕೆ.ಎಲ್.ಇ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ವಿವೇಕ ಸಾವೋಜಿ ವಹಿಸಿ ಮಾತನಾಡುತ್ತಾ, ಕೆ.ಎಲ್.ಇ. ಶಿಕ್ಷಣ ಸಂಸ್ಥೆಯಲ್ಲಿ ಗಣಿತಶಾಸ್ತ್ರದ ವಿಭಾಗದ ಮೂಲಕ ಅಧಿಕ ಶೈಕ್ಷಣಿಕ ಸಮ್ಮೇಳನಗಳು ಜರುಗಬೇಕು. ಮೂಲ ವಿಜ್ಞಾನ ವಿದ್ಯಾರ್ಥಿಗಳಿಗೆ ಇದು ಅನುಕೂಲವಾಗುತ್ತದೆ. ಕೆ.ಎಲ್.ಇ. ಸಂಸ್ಥೆಯು ಮೂಲ ವಿಜ್ಞಾನ ಶಿಕ್ಷಣಕ್ಕೆ ಮಹತ್ವ ಕೊಡುತ್ತದೆ. ಈ ಹಿನ್ನೆಲೆಯಲ್ಲಿ ಪದವಿ ವಿದ್ಯಾರ್ಥಿಗಳಿಗೆ ಈ ಸಮ್ಮೇಳನಗಳಲ್ಲಿ ಭಾಗವಹಿಸುವ ಅವಕಾಶ ಸಿಗಬೇಕು. ವಿಭಿನ್ನ ವಿಷಯಗಳ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರವಾಗಿ ತಿಳಿಸಿಕೊಡಬೇಕು. ಇಂದಿನ ವಿದ್ಯಾರ್ಥಿಗಳಿಗೆ ಇದು ಪ್ರಯೋಜನಕಾರಿಯಾಗಿದೆ ಎಂದು ಹೇಳಿದರು.

ಈ ಸಮಾರಂಭದ ಗೌರವಾನ್ವಿತ ಅತಿಥಿಗಳಾಗಿ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಶಿವಾನಂದ ಬಿ. ಹೊಸಮನಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಪ್ರೊ. ವಿ. ಶ್ರೀನಿವಾಸ ಮಾತನಾಡಿದರು.

ಮಿಸ್. ವಿಜಯಲಕ್ಷ್ಮಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಪ್ರಾಚಾರ್ಯರಾದ ಡಾ.ವ್ಹಿ.ಡಿ. ಯಳಮಲಿ ಸ್ವಾಗತಿಸಿದರು. ಪ್ರೊ. ಟಿ. ವೆಂಕಟೇಶ ಅತಿಥಿಗಳನ್ನು ಪರಿಚಯಿಸಿದರು. ಪ್ರೊ.ಎಸ್.ಎಸ್. ಚೋಬಾರಿ ವಂದಿಸಿದರು. ಪ್ರೊ. (ಮಿಸ್.) ಎಮ್.ಎಸ್. ಬಾಗಿ ಮತ್ತು ಪ್ರೊ.ದಿವ್ಯಾ ಪರುಲೇಕರ ಕಾರ್ಯಕ್ರಮ ನಿರೂಪಿಸಿದರು. ಕಾಲೇಜಿನ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಎಲ್.ವ್ಹಿ. ದೇಸಾಯಿ ಹಾಗೂ ಸದಸ್ಯರು, ಡಾ.ಎಚ್.ಬಿ. ರಾಜಶೇಖರ ಮತ್ತು ಶಿಕ್ಷಕ ಪ್ರತಿನಿಧಿಗಳು ಕಾಲೇಜ ಸಿಬ್ಬಂದಿಯವರು, ವಿದ್ಯಾರ್ಥಿವೃಂದದವರು ಉಪಸ್ಥಿತರಿದ್ದರು.

❑❑

---

## ಶ್ರೀ ಬಿ. ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯ, ಬೆಳಗಾವಿ

### ಉಚಿತ ಆರೋಗ್ಯ ತಪಾಸಣಾ ಶಿಬಿರ



ವಿಶ್ವ ಆರೋಗ್ಯ ದಿನದ ನಿಮಿತ್ತವಾಗಿ ದಂತ, ನೇತ್ರ ಹಾಗೂ ಮೂಗು, ಕಿವಿ, ಗಂಟಲು ತಪಾಸಣೆಯನ್ನು ಧಾರವಾಡದಲ್ಲಿ ಬೆಳಗಾವಿಯ ವಿಶ್ವನಾಥ ಕತ್ತಿ ದಂತ ವಿಜ್ಞಾನ ಮಹಾವಿದ್ಯಾಲಯ ಹಾಗೂ ಕೆಎಲ್ಇ ಶ್ರೀ ಬಿ. ಎಂ. ಕಂಕಣವಾಡಿ ಆಯುರ್ವೇದಿಕ ಮಹಾವಿದ್ಯಾಲಯ ಇವುಗಳ ಸಂಯುಕ್ತಾಶ್ರಯದಲ್ಲಿ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಲಾರಿ ಚಾಲಕರು ದೀರ್ಘಕಾಲಿನವರೆಗೆ ಚಾಲನೆ ಮಾಡುತ್ತ ಮನೆಯಿಂದ ದೂರ ಉಳಿಯುವದರಿಂದ ಕೆಲವರು, ಅನೇಕ ಚಟಗಳಿಗೆ ಬಲಿಯಾಗುತ್ತಾರೆ. ಕ್ಯಾನ್ಸರ, ದಂತ ಸಮಸ್ಯೆ, ಮಧುಮೇಹ, ರಕ್ತದೊತ್ತಡ ಹಾಗೂ ಹೆಚ್ಐವಿ ರೋಗಗಳಿಗೆ ಬಾಧಿತರಾಗುತ್ತಾರೆ. ಅವರಿಗೆ ನಿರಂತರವಾಗಿ ಆರೋಗ್ಯ ತಪಾಸಣೆ ಜೊತೆಗೆ ಜಾಗೃತಿ ಮೂಡಿಸುವ ಕಾರ್ಯ ನಡೆಯಬೇಕೆಂದು ಡಾ. ಅನಿಲ ಅಂಕೋಲಾ ಅವರು ಹೇಳಿದರು. ಶಿಬಿರದಲ್ಲಿ ಸುಮಾರು ೧೫೦ಕ್ಕೂ ಅಧಿಕ ಚಾಲಕರನ್ನು ತಪಾಸಿಸಲಾಯಿತು. ಡಾ. ರೂಪಾಲಿ ಸಂಕೇಶ್ವರಿ, ಡಾ. ಸಾಗರ ಡಾಲಿಹಾಳ, ಡಾ. ಸುಕುಮಾರ ನಂದಗೌಡರ, ಡಾ.ಕಲ್ಮೇಶ ಸಂಗೊಳ್ಳಿ ಮಹಾಂತೇಶ ಇಂಚಲ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

❑❑

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಶಿವಾನಂದ ಹೊಸಮನಿಯವರಿಗೆ ಕೆಎಲ್‌ಇ ಸಂಸ್ಥೆಯಿಂದ ಸತ್ಕಾರ



ವಿಶ್ರಾಂತ ಕುಲಪತಿ ಡಾ. ಶಿವಾನಂದ ಹೊಸಮನಿಯವರನ್ನು ಸತ್ಕರಿಸಿ ಮಾತನಾಡುತ್ತಿರುವ ಶ್ರೀ ಮಹಾಂತೇಶ ಕವಟಗಿಮಠರವರು.

ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಗುಣಾತ್ಮಕವಾಗಿ ಬೆಳೆಸುವಲ್ಲಿ ಡಾ.ಶಿವಾನಂದ ಹೊಸಮನಿಯವರು ಅಪಾರ ಕೊಡುಗೆ ನೀಡಿದ್ದಾರೆಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಶ್ರೀ ಮಹಾಂತೇಶ ಕವಟಗಿಮಠ ನುಡಿದರು.

ಅವರು ಲಿಂಗರಾಜ ಮಹಾವಿದ್ಯಾಲಯದ ಕೇಂದ್ರಸಭಾಗೃಹದಲ್ಲಿ ೨೦.೬.೨೦೧೯ ರಂದು ಆಯೋಜಿಸಿದ್ದ ರಾಣಿ ಚನ್ನಮ್ಮ ವಿವಿ ವಿಶ್ರಾಂತ ಕುಲಪತಿ ಡಾ.ಶಿವಾನಂದ ಹೊಸಮನಿಯವರ ಅಭಿನಂದನಾ ಸಮಾರಂಭದಲ್ಲಿ ಕೆಎಲ್‌ಇ ಸಂಸ್ಥೆಯ ಪರವಾಗಿ ಅವರನ್ನು ಅಭಿನಂದಿಸಿ ಮಾತನಾಡಿದರು.

ಡಾ.ಹೊಸಮನಿಯವರು ಕೃಷಿ ಚಿಂತಕರಾಗಿ, ದಕ್ಷ ಅಧಿಕಾರಿಗಳಾಗಿ ಗಡಿಜಿಲ್ಲೆ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೆಳವಣಿಗೆಯಲ್ಲಿ ವಿಶೇಷವಾದ ಕೊಡುಗೆಯನ್ನು ನೀಡಿದ್ದಾರೆ. ಶಿಕ್ಷಣ ಎನ್ನುವುದು ಸಮಾನ ಧರ್ಮವನ್ನು ಬೋಧಿಸುತ್ತದೆ. ಅದು ಎಲ್ಲರ ಸೊತ್ತು, ಬಡವ ಶ್ರೀಮಂತ ಎಂಬ ಭೇದಭಾವವಿಲ್ಲದೆ ಜ್ಞಾನ ಎಲ್ಲರಿಗೂ ಒಲಿಯುತ್ತದೆ. ಎಲ್ಲಿ ಗುಣಾತ್ಮಕವಾದ ಶಿಕ್ಷಣ ಇರುವುದೋ ಅಲ್ಲಿ ಸಮಾಜವು ಉನ್ನತಮಟ್ಟದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯದ ಶಿಕ್ಷಣ ಹಾಗೂ ಸಂಶೋಧನಾಂಗಗಳನ್ನು ಹೊಸಮನಿಯವರು ಬಲಪಡಿಸಿದ್ದಾರೆ. ಇಂದು ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣವು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಉನ್ನತ ಶಿಕ್ಷಣಕ್ಕೆ ಭದ್ರವಾದ ಅಡಿಪಾಯ ಹಾಕುವುದು ಅಗತ್ಯವೆನಿಸಿಕೊಂಡಿದೆ. ದಕ್ಷ ಹಾಗೂ ಸೇವಾನಿಷ್ಠ ಕುಲಪತಿಗಳಿಂದ ಮಾತ್ರ ಒಂದು ವಿಶ್ವವಿದ್ಯಾಲಯ ಜಾಗತಿಕ ಮನ್ನಣೆಗೆ ಪಾತ್ರವಾಗಲು ಸಾಧ್ಯವೆಂದು ಹೇಳುತ್ತಾ, ಹೊಸಮನಿಯವರನ್ನು ಸತ್ಕರಿಸಿದರು.

ಸತ್ಕಾರವನ್ನು ಸ್ವೀಕರಿಸಿ ಮಾತನಾಡಿದ ಡಾ.ಶಿವಾನಂದ ಹೊಸಮನಿಯವರು ಬೆಳಗಾವಿ ತವರು ಜಿಲ್ಲೆಯವನಾದ ನಾನು ಆಕಸ್ಮಿಕವಾಗಿ ಕುಲಪತಿ ಸ್ಥಾನವನ್ನು ಅಲಂಕರಿಸಿದೆ. ರೈತರಿಗೆ ನಾನು ನೀಡಿದ ಸೇವೆ ಹಾಗೂ ರೈತರಿಗಾಗಿ ಮಾಡಿದ ಹಲವಾರು ಯೋಜನೆಗಳಿಂದ ಈ ಗೌರವಾನ್ವಿತ ಸ್ಥಾನವನ್ನು ಹೊಂದಲು ಸಾಧ್ಯವಾಯಿತು. ಕೆಎಲ್ಇ ಸಂಸ್ಥೆಯು ಉತ್ತರ ಕರ್ನಾಟಕ ಮೇರುಪರ್ವತ. ಮೊದಲಿನಿಂದಲೂ ಈ ಸಂಸ್ಥೆಯೊಂದಿಗೆ ನನ್ನದು ಉತ್ತಮ ಒಡನಾಟವಿದ್ದು, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಸ್ಮರಣೀಯ ಕೊಡುಗೆಯನ್ನು ನೀಡಿದೆ. ಕೆಎಲ್ಇ ಸಂಸ್ಥೆಯನ್ನು ಕಟ್ಟಿದ ಸಪ್ತರ್ಷಿಗಳನ್ನು ಹಾಗೂ ಅದನ್ನು ವಿಸ್ತಾರೋನ್ನತವಾಗಿ ಬೆಳೆಸಿದ ಡಾ.ಪ್ರಭಾಕರ ಕೋರೆ ಹಾಗೂ ತಂಡದವರನ್ನು ನಾನು ಅಭಿನಂದಿಸುತ್ತೇನೆ. ಇಂದು ಶಿಕ್ಷಣವೆನ್ನುವುದು ತನ್ನ ಗುಣಾತ್ಮಕತೆಯನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ. ಕೌಶಲ್ಯಾಧಾರಿತ ಶಿಕ್ಷಣಕ್ಕೆ ನಾವು ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಅದು ಸಾಧ್ಯವಾಗುತ್ತಿಲ್ಲ. ನಮ್ಮ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಪಡೆಯುತ್ತಾರೆ ಆದರೆ ಪ್ರಾಯೋಗಿಕವಾಗಿ ಅನುಷ್ಠಾನದಲ್ಲಿ ಅದನ್ನು ತರುವಲ್ಲಿ ವಿಫಲವಾಗುತ್ತಾರೆ. ಹಾಗಾಗದ ಹಾಗೆ ಶಿಕ್ಷಣದಲ್ಲಿ ವಿಶೇಷ ಬದಲಾವಣೆ ತರುವುದು ಅಗತ್ಯವೆನಿಸಿದೆ. ನಾವು ವಿಶ್ವದ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ಪಡೆಯಲು ಸಾಧ್ಯವಾಗುತ್ತಿಲ್ಲ ಇದಕ್ಕೆ ಕಾರಣ ನಮ್ಮ ಉನ್ನತ ಶಿಕ್ಷಣ ಗುಣಾತ್ಮಕತೆಯನ್ನು ಕಳೆದುಕೊಂಡಿರುವುದು. ಸತತ ದುಡಿಮೆ ಹಾಗೂ ಪರಿಶ್ರಮದಿಂದ ಮಾತ್ರ ಅಗಾಧವಾದುದನ್ನು ಸಾಧಿಸಲು ಸಾಧ್ಯ. ನನ್ನ ಕಾಲಾವಧಿಯಲ್ಲಿ ಅಗತ್ಯವಾದ ಕ್ರಮಗಳನ್ನು ಹಾಗೂ ಯೋಜನೆಗಳನ್ನು ಕೈಗೊಂಡಿದ್ದೇನೆ. ಅವುಗಳು ಅನುಷ್ಠಾನಗೊಳ್ಳುವಲ್ಲಿ ಶ್ರಮಿಸಿದ್ದೇನೆ. ಇದಕ್ಕೆ ಎಲ್ಲರ ಸಹಾಯ ಸಹಕಾರಗಳು ದೊರೆತಿವೆ ಅವರೆಲ್ಲರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆಂದು ಹೇಳಿದರು.

ವೇದಿಕೆಯ ಮೇಲೆ ಕೆಎಲ್ಇ ಸಂಸ್ಥೆಯ ಉಪಾಧ್ಯಕ್ಷರಾದ ಎಂ.ಸಿ.ಕೊಳ್ಳಿ, ಬಸವರಾಜ ತಟವಟಿ, ಆಜೀವ ಸದಸ್ಯರಾದ ಡಾ. ಎಂ. ಟಿ. ಕುರಣಿ ಹಾಗೂ ಕೆಎಲ್ಇ ಸಂಸ್ಥೆಯ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಆರ್.ಎಲ್ ವಿಜ್ಞಾನ ಕಾಲೇಜಿನ ಪ್ರಾಚಾರ್ಯ ಡಾ.ವಿಘ್ನೇಶ್ವರ ಯಳಮಲಿಯವರು ಸ್ವಾಗತಿಸಿದರು. ಲಿಂಗರಾಜ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಆರ್.ಎಂ.ಪಾಟೀಲ ವಂದಿಸಿದರು. ಡಾ.ಮಹೇಶ ಗುರನಗೌಡರ ನಿರೂಪಿಸಿದರು. ❑❑

## ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರ, ಬೆಳಗಾವಿ

### ಕೆಎಲ್‌ಇ ಮಧುಮೇಹ ಕೇಂದ್ರಕ್ಕೆ ಜರ್ಮನಿಯಿಂದ ಅತ್ಯುತ್ತಮ ಕೇಂದ್ರ ಪ್ರಶಸ್ತಿ



ಆಸ್ಪತ್ರೆಯ ನಿರ್ದೇಶಕರಾದ ಡಾ.ಎಂ.ವ್ಹಿ.ಜಾಲಿ ಹಾಗೂ ಡಾ.ಸುಜಾತಾ ಜಾಲಿಯವರು ಪ್ರಶಸ್ತಿ ಸ್ವೀಕರಿಸುತ್ತಿರುವ ಒಂದು ದೃಶ್ಯ

ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ಮಧುಮೇಹ ಕೇಂದ್ರವು ಚಿಕ್ಕಮಕ್ಕಳ ಮಧುಮೇಹ ಚಿಕಿತ್ಸೆ ಹಾಗೂ ನಿಯಂತ್ರಣದಲ್ಲಿ ನಿರಂತರವಾಗಿ ಗುಣಮಟ್ಟ ಕಾಯ್ದುಕೊಂಡು ಮಕ್ಕಳ ಆರೋಗ್ಯದ ಕುರಿತು ವಿಶೇಷ ಕಾಳಜಿ ವಹಿಸುತ್ತಿರುವದಕ್ಕೆ ಜರ್ಮನಿಯ ಸ್ವೀಟ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ಏಪ್ರಿಲ್ ತಿಂಗಳಿನಲ್ಲಿ ಜರ್ಮನಿಯ ಹನ್ನೊವರ ನಗರದಲ್ಲಿ ಅಂತರಾಷ್ಟ್ರೀಯ ಚಿಕ್ಕಮಕ್ಕಳ ಮತ್ತು ತರುಣರ ಮಧುಮೇಹ ಸಂಸ್ಥೆ, ಯುರೋಪಿನ ಅಂತರಾಷ್ಟ್ರೀಯ ಮಧುಮೇಹ ಪ್ರತಿಷ್ಠಾನ ಹಾಗೂ ಚಿಕ್ಕಮಕ್ಕಳ ಮಧುಮೇಹ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವೀಟ್ ಎಂಬ ಸಂಸ್ಥೆಯು ಕೊಡಮಾಡುವ ಪ್ರಶಸ್ತಿಯನ್ನು ಕೆಎಲ್‌ಇ ಆಸ್ಪತ್ರೆಯ ಮಧುಮೇಹ ಕೇಂದ್ರದ ಚಿಕ್ಕಮಕ್ಕಳ ಮಧುಮೇಹ ತಜ್ಞವೈದ್ಯರಾದ ಡಾ. ಸುಜಾತಾ ಜಾಲಿ ಅವರು ಪ್ರಶಸ್ತಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ. ಎಂ. ವಿ. ಜಾಲಿ ಅವರು ಉಪಸ್ಥಿತರಿದ್ದರು.

ಚಿಕ್ಕಮಕ್ಕಳ ಮಧುಮೇಹ ಕೇಂದ್ರವು ಮಕ್ಕಳ ದಾಖಲೆಗಳ ಸರಿಯಾದ ನಿರ್ವಹಣೆ, ಗುಣಮಟ್ಟ ಕಾಯ್ದುಕೊಳ್ಳುವಿಕೆ, ಚಿಕ್ಕಮಕ್ಕಳ ಮಧುಮೇಹ ತಜ್ಞವೈದ್ಯರು, ನರ್ಸಿಂಗ ಸಿಬ್ಬಂದಿ, ಡೈಟಿಸಿಯನ್, ಆಪ್ತಸಮಾಲೋಚಕರು, ಸಮಾಜ ಸೇವಕರನ್ನೊಳಗೊಂಡ ಕೇಂದ್ರವು ರಾಷ್ಟ್ರೀಯ ಮಟ್ಟದ ಮಧುಮೇಹ ಜಾಗೃತಿ ಶಿಕ್ಷಣವನ್ನು ನೀಡುವಲ್ಲಿ ತಲ್ಲೀನವಾಗಿರುವುದನ್ನು ಗಣನೆಗೆ ತೆಗೆದುಕೊಂಡು ಈ ಪ್ರಶಸ್ತಿಯನ್ನು ನೀಡಲಾಗಿದೆ.

# ಅಭಿಯಾಂತ್ರಿಕ ಹಾಗೂ ತಾಂತ್ರಿಕ ಮಹಾವಿದ್ಯಾಲಯ, ಚಿಕ್ಕೋಡಿ

## ಸಂಭ್ರಮ-೨೦೧೯




ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವ ಕೆಎಲ್‌ಇ ನಿರ್ದೇಶಕರಾದ ಶ್ರೀ ಎಸ್.ಸಿ. ಮೆಟಗುಡ ಹಾಗೂ ಗಣ್ಯರು.

ಚಿಕ್ಕೋಡಿಯ ಅಭಿಯಾಂತ್ರಿಕ ಹಾಗೂ ತಾಂತ್ರಿಕ ಕಾಲೇಜಿನಲ್ಲಿ ೧೧ನೇ ವಾರ್ಷಿಕ ಸಮ್ಮೇಳನ ಸಂಭ್ರಮ ೧೦, ೧೧ ಮೇ ೨೦೧೯ ರಂದು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಎರೊಸ್ಪೆಸ್ ಆಯ್ಯಂಡ್ ಗ್ರುಪ, ಸಿ.ಎಫ್.ಓ ಎಕಸ್ ವ್ಯವಸ್ಥಾಪಕ ನಿರ್ದೇಶಕ ರಾಜೀವ ಕೌಲ ಆಗಮಿಸಿದ್ದರು. ಅವರು ಮಾತನಾಡಿ ಕುತೂಹಲ ನಿಮ್ಮನ್ನು ಬೆಳೆಸುತ್ತದೆ. ಯಾವುದೇ ವಿಷಯದಲ್ಲಿನ ಅನುಮಾನವನ್ನು ನಿರಾಕರಿಸದೇ ಪ್ರಾಧ್ಯಾಪಕರೊಂದಿಗೆ ಚರ್ಚಿಸಿ ಅವುಗಳನ್ನು ಪರಿಹರಿಸಿಕೊಳ್ಳಬೇಕೆಂದರು. ಇಂದು ಮಾಹಿತಿ ವಿಪುಲವಾಗಿ ದೊರೆಯುತ್ತದೆ. ಆದರೇ ಸರಿಯಾದ ಮಾಹಿತಿಯನ್ನು ಓದುವುದು ಹಾಗೂ ಸರಿಯಾದುದ್ದನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ. ಕಾಲಕಾಲಕ್ಕೆ ಅಪಡೆಟ್ ಆಗದ ಕಾರಣ ಕೊಡ್ಯಾಕನಂತ ಹೆಸರಾಂತ ಕಂಪನಿಗಳು ಇಂದು ಮುಚ್ಚಿಹೋಗಿವೆ ಎಂದರು.

ಕಾರ್ಯಕ್ರಮದ ಗೌರವಾನ್ವಿತ ಅತಿಥಿಗಳಾಗಿ ಬೆಳಗಾವಿ ಬೆಲಗಮ್ ಫೆರೋಕಾಸ್ಟ ಪ್ರಾಯಿವೆಟ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ  ಸಚಿನ ಸಬ್ನಿಸ್ ಆಗಮಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ಎಸ್. ಸಿ. ಮೆಟಗುಡ ಮಾತನಾಡಿ ನಮ್ಮ ಕೆ.ಎಲ್.ಇ. ಸಂಸ್ಥೆ ಯಾವತ್ತು ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಾ ಬಂದಿದ್ದು, ಈ ನಿಟ್ಟಿನಲ್ಲಿ ನಾವು ಈ ಮಹಾವಿದ್ಯಾಲಯದಲ್ಲಿ ಎಲ್ಲ ಸೌಕರ್ಯಗಳನ್ನು ಒದಗಿಸಿದ್ದೇವೆ. ಇಲ್ಲಿ ಬಂದಿರುವ ಅತಿಥಿಗಳೇ ತಮಗೆ ಮಾದರಿ ವ್ಯಕ್ತಿಗಳಾಗಿದ್ದಾರೆ. ಅವರು ಒಬ್ಬ ಇಂಜನಿಯರಾಗಿ ನೌಕರಿಯ ಬೆನ್ನತ್ತದೇ ತಮ್ಮದೇ ಆದ ಒಂದು ಉಧ್ಯಮವನ್ನು ಸ್ಥಾಪಿಸಿ, ಇಂದು ಸಾವಿರಾರು ಯುವಕರಿಗೆ ಉದ್ಯೋಗ ನೀಡಿದ್ದಾರೆ. ತಾವು ಸಹಿತ ಕೇವಲ ನೌಕರಿಯ ಬೆನ್ನತ್ತದೇ, ತಾವೇ ನೌಕರಿ ಕೊಡುವಂತಾಗಬೇಕೆಂದರು.

ಕಾಲೇಜಿನ ಪ್ರಾಚಾರ್ಯರಾದ ಡಾ. ಪ್ರಸಾದ ರಾಂಪೂರೆ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ವಾರ್ಷಿಕ ಪತ್ರಿಕೆ ಪಯಣ-೨೦೧೯ನ್ನು ಬಿಡುಗಡೆಗೊಳಿಸಲಾಯಿತು. ಸಂಯೋಜಕರಾದ ಪ್ರೊ. ವೀರಭದ್ರ ಬೂದ್ಯಾಳ ವಾರ್ಷಿಕ ವರದಿ ವಾಚನ ಮಾಡಿದರು. ಕು. ಶ್ರುತಿ ಲಡಗೆ ವಂದಿಸಿದರು ಕು. ಅಶ್ವಿನಿ ತಳವಾರ ಮತ್ತು ಶಿಲ್ಪಾ ವಾರದ ನಿರೂಪಿಸಿದರು. ❑❑

# ಲಿಂಗರಾಜ ಮಹಾವಿದ್ಯಾಲಯ (ಸ್ವಾಯತ್ತ), ಬೆಳಗಾವಿ

## ವಾರ್ಷಿಕ ಸಮಾರೋಪ ಸಮಾರಂಭ




ಪರಿಶ್ರಮ ಹಾಗೂ ಶ್ರದ್ಧೆಯಿಂದ ಮಾಡಿದ ಕೆಲಸಕ್ಕೆ ಪ್ರತಿಫಲ ದೊರೆಯುತ್ತದೆ. ನಿಷ್ಠೆಯಿಂದ ವಿದ್ಯಾರ್ಥಿಗಳು ಅಭ್ಯಾಸದಲ್ಲಿ ನಿರತರಾಗಿ ಸಾಫಲ್ಯತೆಯನ್ನು ಹೊಂದಬೇಕೆಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಘಟಕ ನಿರ್ದೇಶಕರಾದ ಡಾ.ಎಸ್.ಎಂ.ಹುರಕಡ್ಲಿ ಹೇಳಿದರು. ಅವರು ಲಿಂಗರಾಜ ಪದವಿ ಮಹಾವಿದ್ಯಾಲಯದ ಪ್ರಶಸ್ತಿ ವಿತರಣೆ ಹಾಗೂ ವಾರ್ಷಿಕ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು. ವಿದ್ಯಾರ್ಥಿಗಳ ಜೀವನ ಬಂಗಾರಮಯವಾಗಿದ್ದು ಅದನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ಸತತ ಅಭ್ಯಾಸ ಹಾಗೂ ಪರಿಶ್ರಮದಿಂದ ನಿರ್ದಿಷ್ಟವಾದ ಗುರಿಯನ್ನು ತಲುಪಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯ ಡಾ.ಆರ್.ಎಂ.ಪಾಟೀಲ ಅವರು ಮಾತನಾಡಿ ಮಹಾವಿದ್ಯಾಲಯವು ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದೆ. ಅದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು. ಭವಿಷ್ಯತ್ತಿನಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಿಕೊಳ್ಳಿ ಎಂದು ಹೇಳಿದರು.

ಪಿಎಚ್.ಡಿ. ಪದವಿಯನ್ನು ಪಡೆದ ಕೆಎಲ್ಇ ಸಂಸ್ಥೆಯ ಆಜೀವ ಸದಸ್ಯ ಹಾಗೂ ಲಿಂಗರಾಜ ಬಿಬಿಎ ಕಾಲೇಜಿನ ಪ್ರಾಚಾರ್ಯ ಡಾ. ಪ್ರಕಾಶ ಕಡಕೋಳ, ಡಾ.ಬಿ.ಎಂ.ತೇಜಸ್ವಿ, ಹಾಗೂ ಎನ್ಎಸ್ಎಸ್ ಪ್ರಶಸ್ತಿಯನ್ನು ಪಡೆದ ಪ್ರೊ. ಎಸ್. ಎನ್. ಮೂಲಿಮನಿ ಮತ್ತು ಸಾಧನೆಗೈದ ಪ್ರೊ. ವಿನಾಯಕ ವರೂಟೆ, ರಾಘವೇಂದ್ರ ಹಜಗೋಳ್ಕರ, ಪ್ರೊ. ಮಹಾದೇವ ಧರಿಗೌಡರ ಅವರನ್ನು ಸನ್ಮಾನಿಸಲಾಯಿತು. ಪ್ರೊ. ಸುಮಿತ್ರಾ ಚೋಬಾರಿ, ಸಿ. ರಾಮರಾವ್ ಉಪಸ್ಥಿತರಿದ್ದರು.

ಕುಮಾರ ಪ್ರಸಾದ ಪ್ರಾರ್ಥಿಸಿದರು. ಡಾ.ಬಿ.ಎಂ.ತೇಜಸ್ವಿ ಅತಿಥಿಗಳನ್ನು ಪರಿಚಯಿಸಿದರು. ಡಾ.ಗುರುದೇವ ಹುಲೆಪ್ಪನವರಮಠ ವಾರ್ಷಿಕ ವರದಿ ವಾಚಿಸಿದರು. ಪ್ರೊ.ಸಾರಿಕಾ ನಗರೆ, ಪ್ರೊ. ಸರಯೂ ಪೋತ್ನಿಸ್, ನೀತಾ ಗಂಗರೆಡ್ಡಿ ನಿರೂಪಿಸಿದರು. ರವೀಂದ್ರ ಚಿಕ್ಕಮಠ ವಂದಿಸಿದರು. ಬಿ.ಎ. ಪದವಿಯಲ್ಲಿ ಆದರ್ಶ ವಿದ್ಯಾರ್ಥಿಗಳಾಗಿ ಆಯ್ಕೆಯಾದ ಕು.ಅರುಣ ಲೋಕಣ್ಣವರ ಹಾಗೂ ಕು.ವರ್ಷಾ ದೇಶಪಾಂಡೆ, ಬಿ.ಕಾಂ.ದಲ್ಲಿ ಸ್ನೇಹಾ ಮಗದುಮ್ಮ, ಗೌರವ ಸಿಂಗ್ ಅವರಿಗೆ ಸತ್ಕರಿಸಲಾಯಿತು.

## ಪಿ.ಸಿ. ಜಾಬಿನ ವಿಜ್ಞಾನ ಮಹಾವಿದ್ಯಾಲಯ(ಸ್ವಾಯತ್ತ), ಹುಬ್ಬಳ್ಳಿ



ವಿದ್ಯಾರ್ಥಿಗಳು ವಿಜ್ಞಾನಿಗಳ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿಯ ನಿರ್ದೇಶಕರು ಮತ್ತು ಬೆಂಗಳೂರಿನ ಜವಾಹರಲಾಲ್ ನೆಹರು ಸುಧಾರಿತ ವೈಜ್ಞಾನಿಕ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಪ್ರೊ. ಎಸ್.ಎಂ. ಶಿವಪ್ರಸಾದ ಹೇಳಿದರು.

ಕೆಎಲ್‌ಇ ಸಂಸ್ಥೆಯ ಪಿ. ಸಿ. ಜಾಬಿನ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕರ್ನಾಟಕ ರಾಜ್ಯ ವಿಜ್ಞಾನ ತಂತ್ರಜ್ಞಾನ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಕರಾವಿಪ ಜಿಲ್ಲಾ ಸಮಿತಿ ಧಾರವಾಡ ಇವರ ಸಹಯೋಗದಲ್ಲಿ ಧಾರವಾಡ ವಿಭಾಗ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ "ಮನುಕುಲಕ್ಕಾಗಿ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರ" ಚಾಲನೆ ನೀಡಿ ಮಾತನಾಡಿದರು. ವಿಜ್ಞಾನದಲ್ಲಿ ಅಪಾರವಾದ ಅವಕಾಶಗಳಿದ್ದು, ನ್ಯಾನೋ ಟೆಕ್ನೋಲೋಜಿ, ಬಯೋ ಟೆಕ್ನೋಲೋಜಿ ಆರ್ಟಿಫೀಶಿಲ್ ಇಂಟಲಿಜನ್ಸಿ ಶಾಖೆಗಳ ಪರಿಣಿತಿಯನ್ನು ಗಳಿಸಿಕೊಳ್ಳಬೇಕೆಂದರು. ಅಧ್ಯಕ್ಷತೆಯನ್ನು ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಜೆ. ಪಿ. ಜಾಬಿನ ವಹಿಸಿದ್ದರು, ಪ್ರಾಚಾರ್ಯ ಡಾ. ಎಸ್. ವ್ಹಿ. ಹಿರೇಮಠ ಸ್ವಾಗತಿಸಿದರು.  ಸಂಜೀವಕುಮಾರ ಭೂಶೆಟ್ಟಿ ವಂದಿಸಿದರು, ಸಂಯೋಜಕರಾದ ಡಾ. ಬಿ. ಎಸ್. ಅಗಡಿ ಅತಿಥಿಗಳನ್ನು ಪರಿಚಯಿಸಿದರು. ಡಾ ಲಿಂಗರಾಜ ರಾಮಾಪೂರ, ಮಾಲತೇಶ ಬಸಮ್ಮನವರ ಕಾರ್ಯಕ್ರಮ ನಿರೂಪಿಸಿದರು.

□□

## ಡಾ. ಗುರುದೇವಿ ಹುಲೆಪ್ಪನವರಮಠ ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷೆ



ಬೆಳಗಾವಿ ಲಿಂಗರಾಜ ಕಾಲೇಜಿನ ಇಂಗ್ಲೀಷ್ ವಿಭಾಗದ ಮುಖ್ಯಸ್ಥರು ಹಾಗೂ ಖ್ಯಾತ ಸಾಹಿತಿಗಳಾಗಿರುವ ಡಾ.ಗುರುದೇವಿ ಹುಲೆಪ್ಪನವರಮಠ ಅವರು ಬೆಳಗಾವಿ ಜಿಲ್ಲಾ ೧೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ೩೦ಕ್ಕೂ ಹೆಚ್ಚು ಕನ್ನಡ ಹಾಗೂ ಇಂಗ್ಲೀಷ್‌ಗಳಲ್ಲಿ ಗ್ರಂಥಗಳನ್ನು ರಚಿಸಿರುವ ಡಾ. ಗುರುದೇವಿಯವರು ಕಥೆಗಾರರಾಗಿ, ಹಾಸ್ಯ ಪ್ರಬಂಧಕಾರರಾಗಿ, ಕವಿಯತ್ರಿಯಾಗಿ ನಾಡಿನಾದ್ಯಂತ ಗುರುತಿಸಿಕೊಂಡವರು. ಕನ್ನಡ ಇಂಗ್ಲೀಷ ಎರಡು ಭಾಷೆಗಳ ಮೇಲೆ ಪ್ರಭುತ್ವಹೊಂದಿರುವ ಅವರು ಸ್ವಾಲಿಕ್ಯ ರಹಿತ ಮಾತುಗಾರರು. ಅವರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆಯಾಗಿರುವುದಕ್ಕೆ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆಯವರು ಹಾಗೂ ಲಿಂಗರಾಜ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಆರ್. ಎಂ. ಪಾಟೀಲ ಮತ್ತು ಸಿಬ್ಬಂದಿವರ್ಗದವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ರಾಜ-ರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು



ಕೆ.ಎಲ್.ಇ. ಸಂಸ್ಥೆಯ, ರಾಜ-ರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಜರುಗಿತು. ಇಂದಿನ ಯುವ ಜನಾಂಗಕ್ಕೆ ಮಾನವೀಯ ಸಂಬಂಧಗಳ ಬಗ್ಗೆ ಪರಿಪೂರ್ಣ ತಿಳುವಳಿಕೆ ಇದ್ದರೆ ಮಾತ್ರ ಜೀವನದಲ್ಲಿ ಯಶಸ್ಸು ಸಾಧ್ಯ ಎಂದು ಹಾವೇರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ಪರಿಮಳ ಜೈನ್ ಹೇಳಿದರು.

ಅತಿಥಿಗಳಾಗಿ ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯ ಬಿ. ಎಸ್. ಪಟ್ಟಣಶೆಟ್ಟಿ ಹಾಗೂ ವೀರಣ್ಣ ಅಂಗಡಿ ಆಗಮಿಸಿದ್ದರು. ಸ್ಥಾನಿಕ ಆಡಳಿತ ಮಂಡಳಿ ಉಪಾಧ್ಯಕ್ಷ ವ್ಹಿ. ಪಿ. ಲಿಂಗನಗೌಡ್ರ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಕೆ.ಎಲ್.ಇ ಸಂಸ್ಥೆಯು ಡಾ. ಪ್ರಭಾಕರ ಕೋರೆಯವರ ನೇತೃತ್ವದಲ್ಲಿ  ರಾಷ್ಟ್ರ ಹಾಗೂ ಅಂತರ್ ರಾಷ್ಟ್ರೀಯಮಟ್ಟದಲ್ಲಿ ಹೆಸರನ್ನು ಗಳಿಸಿದ್ದು ಗುಣಮಟ್ಟದ ಬೋಧನೆಗೆ ಪ್ರಥಮ ಆದ್ಯತೆಯನ್ನು ನೀಡುತ್ತಿದೆ. ಸಂಸ್ಥೆಯು ಒದಗಿಸುವ ಸವಲತ್ತುಗಳನ್ನು ಬಳಸಿಕೊಂಡು ಉತ್ತಮ ಫಲಿತಾಂಶ ನೀಡಬೇಕೆಂದು ವಿದ್ಯಾರ್ಥಿನಿಯರಿಗೆ ಕರೆ ನೀಡಿದರು. ಪ್ರಾಚಾರ್ಯರಾದ ಎಮ್. ವ್ಹಿ. ಎಲಿಗಾರ ಪ್ರಾಸ್ತಾವಿಕವಾಗಿ ನುಡಿದರು. ಪ್ರೊ. ಎಸ್. ಬಿ. ಗುರ್ಜೇರ ಸ್ವಾಗತಿಸಿದರು.  ನಂದಿನಿ ಕುರವತ್ತಿ ಪ್ರಾರ್ಥಿಸಿದರು. ಪ್ರೊ. ಶ್ರೀಕಾಂತ ಕುಂಚೂರ ವಂದಿಸಿದರು. ಮೋನಿಕಾ ಹಾಗೂ ಸುಧಾ ನಿರೂಪಿಸಿದರು.

---

## ಎಸ್. ಎಸ್. ಬಸವನಾಳ ಶಿಕ್ಷಕರ ತರಬೇತಿ ಸಂಸ್ಥೆ, ಬೆಳಗಾವಿ




ಬೆಳಗಾವಿ ಎಸ್.ಎಸ್.ಬಸವನಾಳ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ೨೦೧೮-೧೯ನೇ ಸಾಲಿನ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಬೀಳ್ಕೊಡುವ ಸಮಾರಂಭವನ್ನು ಆಯೋಜಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ರತ್ನಪ್ರಭಾ ಬೆಲ್ಲದ ಅವರು ವಹಿಸಿದ್ದರು. ಅವರು ಮಾತನಾಡುತ್ತ, ಇವತ್ತಿನ ಸಂದರ್ಭದಲ್ಲಿ ವೈಜ್ಞಾನಿಕ ವಸ್ತುಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಉತ್ತಮವಾದ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ರಾಷ್ಟ್ರನಿರ್ಮಾಣದಲ್ಲಿ ತಮ್ಮದೇ ಆದ ಮೌಲಿಕ ಕೊಡುಗೆಯನ್ನು ನೀಡಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅತಿಥಿಗಳಾಗಿ  ಸ್ಥಾನಿಕ ಆಡಳಿತ ಮಂಡಳಿ ಸದಸ್ಯರಾದ ಎಸ್.ಎಸ್.ಸಾಣಿಕೊಪ್ಪ ಆಗಮಿಸಿ ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನಾಡಿದರು. ಸಂಸ್ಥೆಯ ಪ್ರಾಚಾರ್ಯರಾದ ಎಸ್.ಎಸ್.ಪುರಾಣಿಕಮಠ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆರ್.ಕೆ.ನೇರ್ಲಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಎಸ್.ಎಸ್. ಮಡಿವಾಳರ ವಂದಿಸಿದರು.

# ಡಾ. ಪ್ರಭಾಕರ ಕೋರೆ ಮೂಲಭೂತ ವಿಜ್ಞಾನ ಸಂಶೋಧನಾ ಕೇಂದ್ರ, ಬೆಳಗಾವಿ




ಕೆಎಲ್‌ಇ ಉನ್ನತ ಶಿಕ್ಷಣ ಸಂಸ್ಥೆಯ ಡಾ.ಪ್ರಭಾಕರ ಕೋರೆ ಮೂಲಭೂತ ವಿಜ್ಞಾನ ಸಂಶೋಧನಾ ಕೇಂದ್ರದ ವತಿಯಿಂದ ನಿಯಂತ್ರಕ ಅನುಸರಣೆಗಳು; ಉತ್ತಮ ಪ್ರಯೋಗಾಲಯ ಪದ್ಧತಿಗಳು ವಿಷಯವಾಗಿ ೯ ಏಪ್ರಿಲ್ ೨೦೧೮ ರಂದು ವಿಶ್ವವಿದ್ಯಾಲಯದ ಆರೋಗ್ಯ ವೃತ್ತಿಪರರ ಶಿಕ್ಷಣ ವಿಭಾಗದ ಸಹಯೋಗದಲ್ಲಿ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ನಿಯಂತ್ರಕ ಅನುಸರಣೆಗಳು, ಉತ್ತಮ ಪ್ರಯೋಗಾಲಯ ಪದ್ಧತಿಗಳು ವಿಷಯವಾಗಿ ಮಾಹಿತಿ ಪಡೆಯ ಬಯಸುವ, ವಿವಿಧ ವಿಶ್ವವಿದ್ಯಾಲಯಗಳ, ಶಿಕ್ಷಣ ಸಂಸ್ಥೆಗಳ, ಮಹಾವಿದ್ಯಾಲಯಗಳ ಮಧ್ಯ ವೃತ್ತಿ ವಿಜ್ಞಾನಿಗಳು, ಸಂಶೋಧನಾ ವಿಜ್ಞಾನಿಗಳು, ಸಿಬ್ಬಂದಿ, ಸಂಶೋಧನಾ ನಿರತ ವಿದ್ಯಾರ್ಥಿಗಳು ಔಷಧೀಯ ವಿಜ್ಞಾನ, ದಂತ ವಿಜ್ಞಾನ, ವೈದ್ಯಕೀಯ ವಿಜ್ಞಾನ, ಜೀವ ರಸಾಯನ ವಿಜ್ಞಾನ, ಸೂಕ್ಷ್ಮ ಜೀವ ವಿಜ್ಞಾನ ಮೊದಲಾದ ವಿಭಾಗಗಳ ೬೦ ಪ್ರತಿನಿಧಿಗಳು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.

ಕಾಹೆರ್ ವಿಶ್ವನಾಥ ಕತ್ತಿ ದಂತ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಕೆಎಲ್‌ಇ ಡಾ.ಪ್ರಭಾಕರ ಕೋರೆ ಮೂಲಭೂತ ವಿಜ್ಞಾನ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿಗಳು ಆಗಿರುವ ಡಾ. ಅಲಕಾ ಕಾಳೆ ಮತ್ತು ಗಣ್ಯರು ವಿಚಾರಸಂಕಿರಣವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಡಾ. ಅಲಕಾ ಕಾಳೆ ಸಂಶೋಧನಾ ಕೇಂದ್ರದ ಸಾಧನೆಗಳು ಮತ್ತು ನೂತನವಾಗಿ ಪ್ರಾರಂಭಿಸಿರುವ ಜೀವ ರಸಾಯನ ವಿಜ್ಞಾನ ಸ್ನಾತಕೋತ್ತರ ಪದವಿಯ ಕುರಿತು ಮಾಹಿತಿ ನೀಡಿದರು.

ಮುಖ್ಯ ಉಪನ್ಯಾಸಕರಾಗಿದ್ದ ಅಜಿತ್ ಎಕಲ್ ಮಾತನಾಡಿ ಅತ್ಯುತ್ತಮ ಸಂಶೋಧನಾ ಪ್ರಯೋಗಾಲಯಗಳು, ಸಂಶೋಧನಾ ಪರಿಕರಗಳು, ಸಂಶೋಧನಾ ಪದ್ಧತಿಗಳ ಕುರಿತು ಮಾಹಿತಿ ನೀಡಿದರು. ಕರ್ನಾಟಕ ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ಪ್ರಾಧ್ಯಾಪಕರಾಗಿರುವ ಡಾ.ವಿ. ಶ್ಯಾಮಕುಮಾರ ಅವರು ವಿಚಾರ ಸಂಕಿರಣವನ್ನುದ್ದೇಶಿಸಿ ಮಾತನಾಡಿದರು. ಕೆಎಲ್‌ಇ ಡಾ.ಪ್ರಭಾಕರ ಕೋರೆ ಮೂಲಭೂತ ವಿಜ್ಞಾನ ಸಂಶೋಧನಾ ಕೇಂದ್ರದ ನಿರ್ದೇಶಕರಾಗಿರುವ ಡಾ. ಸುನೀಲ್ ಜಲಾಲಪುರೆ ಸ್ವಾಗತಿಸಿ ಕೇಂದ್ರದ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ವಿಚಾರ ಸಂಕಿರಣದ ಕೊನೆಯಲ್ಲಿ ವಿಜ್ಞಾನಿ ಡಾ.ಸಂಜಯ್ ಮಿಶ್ರಾ ಪ್ರಮಾಣ ಪತ್ರಗಳನ್ನು ವಿತರಿಸಿ ವಂದಿಸಿದರು.

# ಕೆಎಲ್ಇ ಫ್ಯಾಶನ್ ಟೆಕ್ನಾಲಜಿ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ "ವಿನ್ಯಾಸ-೨೦೧೯"



ಜೆ.ಎನ್.ಎಂ.ಸಿ ಆವರಣದ ಡಾ. ಜೀರಗೆ ಸಭಾ ಭವನದಲ್ಲಿ ಕೆ ಎಲ್ ಇ ಸಂಸ್ಥೆಯ ಫ್ಯಾಶನ್ ಟೆಕ್ನಾಲಜಿ ಮತ್ತು ಆಪ್ಪರೆಲ್ ಡಿಸೈನ್ ಮಹಿಳಾ ಮಹಾವಿದ್ಯಾಲಯ ಬೆಳಗಾವಿ ವತಿಯಿಂದ "ವಿನ್ಯಾಸ-೨೦೧೯" ವಸ್ತ್ರ ವಿನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ನಮ್ಮ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ತಮ್ಮ ಕೌಶಲ್ಯದಿಂದ ಪ್ರಪ್ರಥಮ ದಾರಿಗೆ ಸಂಶೋಧಿಸಿ ವಿನ್ಯಾಸಗೊಳಿಸಿರುವುದು ಸೇರಿದಂತೆ ೬೦ಕ್ಕೂ ಹೊಸ ಬಗೆಯ ವಸ್ತ್ರವಿನ್ಯಾಸಗಳನ್ನು ತಯಾರಿಸಿ ಒಟ್ಟು ೧೮ ಥೀಮ್‌ಗಳೊಂದಿಗೆ ೪೦ ಮಾಡೆಲ್ಸ್ ವಿದ್ಯಾರ್ಥಿಗಳು ಹಾಗೂ ೧೮ ಚಿಕ್ಕ ಮಕ್ಕಳು ರ್‍ಯಾಂಪ್ ಮೇಲೆ ಕ್ಯಾಟ್ ವಾಕ್ ಮಾಡಿ ನೋಡುಗರ ಮನಸೆಳೆದರು. ಮುಖ್ಯ ಅತಿಥಿಗಳಾಗಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ಕುಲಸಚಿವರಾದ ಪ್ರೊ. ಪ್ರಹ್ಲಾದ್ ತಡಸದ್ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಬಿ ವ್ಹಿ ಬೆಲ್ಲದ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಜಯಸಿಂಹ ಬಿ. ವಹಿಸಿದ್ದರು. ಪ್ರಾಂಶುಪಾಲರಾದ ಜ್ಯೋತಿ ಮುತ್ತೂರ ಸ್ವಾಗತಿಸಿದರು. ರೂಪಾ ಸಾಮಂತ ನಿರೂಪಿಸಿದರು.

---

# ಕೆಎಲ್ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರ, ಬೆಳಗಾವಿ



ಕೆಎಲ್ಇ ಸಂಸ್ಥೆಯ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರದ ಎನ್‌ಎಸ್‌ಎಸ್ ಘಟಕವು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ಈ ಸಂದರ್ಭದಲ್ಲಿ ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ೫೦೦ ಸಸಿಗಳನ್ನು ನೆಡುವ ಮೂಲಕ ವಿಶಿಷ್ಟವಾದ ಅಭಿಯಾನವನ್ನು ಮಾಡಿತು. ಕೆಎಲ್ಇ ವಿಶ್ವವಿದ್ಯಾಲಯದ ಮಹಿಳಾ ಘಟಕವು ಈ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಸಂಯೋಜಿಸಿತ್ತು. ಕುಲಪತಿಗಳಾದ ಡಾ.ವಿವೇಕ ಸಾವೋಜಿ, ಕುಲಸಚಿವರಾದ ಡಾ.ವ್ಹಿ.ಡಿ.ಪಾಟೀಲ, ಡಾ.ಕಾಳೆ, ಡಾ.ಎನ್.ಎಸ್.ಮಹಾಂತಶೆಟ್ಟಿ, ಡಾ. ಪ್ರೀತಿ ದೊಡವಾಡ, ಡಾ.ಸುಧಾ ರೆಡ್ಡಿ, ಡಾ.ಮುಧೋಳ ಹಾಗೂ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು. ಎನ್‌ಎಸ್‌ಎಸ್ ಘಟಕದ ಅಧಿಕಾರಿಗಳು, ಸಂಯೋಜಕರು ಹಾಗೂ ಸ್ವಯಂಸೇವಕರು ಸಸಿಗಳನ್ನು ನೆಡುವ ಮೂಲಕ ಸಮಾರಂಭವನ್ನು ಅರ್ಥಪೂರ್ಣಗೊಳಿಸಿದರು.

❑❑

## ಉಚಿತ ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರ



ಪ್ರತಿ ವರ್ಷ ನಮ್ಮ ದೇಶದಲ್ಲಿ ಶೇಕಡಾ ೫ ರಷ್ಟು ಮಹಿಳೆಯರು ಸ್ತನ ಕ್ಯಾನ್ಸರ್‌ನಿಂದ ಮರಣವನ್ನಪ್ಪುತ್ತಿರುವದು ನಿಜಕ್ಕೂ ಖೇದಕರ ಸಂಗತಿಯಾಗಿದೆ ಎಂದು ಕೆಎಲ್‌ಇ ಮಹಿಳಾ ಸಬಲೀಕರಣ ಘಟಕ ಮುಖ್ಯ ಸಂಯೋಜನಾಧಿಕಾರಿ ಡಾ. ಪ್ರೀತಿ ದೊಡವಾಡ ಹೇಳಿದರು. ಅವರು ಬೆಳಗಾವಿ ನಗರದ ಕೆಎಲ್‌ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆ ಹಾಗೂ ಕೆಎಲ್‌ಇ ಮಹಿಳಾ ಸಬಲೀಕರಣ ಘಟಕ ಸಹಯೋಗದಲ್ಲಿ ನಡೆದ "ಉಚಿತ ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರ"ದ ಅಂಗವಾಗಿ ಮಾತನಾಡುತ್ತಿದ್ದರು. ಸ್ತನ ಕ್ಯಾನ್ಸರ ಬಗ್ಗೆ ಭಯಪಡದೇ ಮುನ್ನೆಚ್ಚರಿಕೆಯ ಕ್ರಮಗಳಾಗಿ ಸ್ವಯಂ ತಪಾಸಣೆ, ಇದರಿಂದ ಸಮಾಧಾನವಾಗದಿದ್ದರೆ ನುರಿತ ಶಸ್ತ್ರಚಿಕಿತ್ಸಾ ವೈದ್ಯರುಗಳಿಂದ ತಪಾಸಣೆ ಹಾಗೂ ವೈದ್ಯಕೀಯ ಪರೀಕ್ಷೆಯಾದ ಮ್ಯಾಮೊಗ್ರಾಫಿ ಮಾಡಿಸಿಕೊಳ್ಳುವದರಿಂದ ತಿಳಿದುಕೊಳ್ಳಬಹುದಾಗಿದೆ ಎಂದು ನುಡಿದರು. ಆಸ್ಪತ್ರೆಯ ನಿರ್ದೇಶಕ ಡಾ. ಎಸ್. ಸಿ. ಧಾರವಾಡ ಉಪಸ್ಥಿತರಿದ್ದರು.

ಡಾ. ರೇಣುಕಾ ಮೆಟಗುಡ್, ಡಾ. ಹರಪ್ರೀತ ಕೌರ್, ಮತ್ತಿತರೆ ಪದಾಧಿಕಾರಿಗಳಾದ ಡಾ. ಮೀನಾಕ್ಷಿ ಮಾಸ್ತಿ, ಡಾ. ಸ್ನೇಹಲ, ಡಾ. ಶಿಲ್ಪಾ ಮೇಳೆದ, ಡಾ. ಸುಧಾ ರೆಡ್ಡಿ, ಆಶಾ ಭಟ್ ಮೊದಲಾದವರು ಉಪಸ್ಥಿತರಿದ್ದರು. ಸುಮಾರು ೨೫೦ ಕ್ಕೂ ಅಧಿಕ ಆಸ್ಪತ್ರೆಯ ಸಿಬ್ಬಂದಿಗೆ ಸ್ತನ ಕ್ಯಾನ್ಸರನ ತಪಾಸಣೆ ಮಾಡಲಾಯಿತು.

---

## ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ




ಎಷ್ಟು ವರ್ಷ ಬದುಕಿದ್ದೇವೆ ಎನ್ನುವದಕ್ಕಿಂತ ಎಷ್ಟು ಅರ್ಥಪೂರ್ಣವಾಗಿ ಬದುಕಿದ್ದೇವೆ ಎನ್ನುವುದು ಮಹತ್ವವಾದದ್ದು, ಪ್ರತಿಯೊಬ್ಬನಿಗೂ ಜೀವನದಲ್ಲಿ ಏನಾದರು ಮಾಡಬೇಕೆನ್ನುವ ಹುಚ್ಚು  ಇರಬೇಕೆಂದು ಜಿಲ್ಲಾ ಪಂಚಾಯತದ ಮುಖ್ಯ ಹಣಕಾಸಿನ ಅಧಿಕಾರಿಗಳಾದ ಪ್ರಶಾಂತ ಜೆ.ಸಿ  ಹೇಳಿದರು.

ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತ ಅವರು ಪ್ರತಿಯೊಬ್ಬ  ವಿದ್ಯಾರ್ಥಿಗೂ ತನ್ನದೇ ಆದ ಗುರಿ ಇರಬೇಕು. ಆ ಗುರಿಯನ್ನು ಮುಟ್ಟುವ ಛಲ ನಿಮ್ಮಲ್ಲಿರಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಇನ್ನೋರ್ವ ಅತಿಥಿಗಳಾದ ಕೆ. ಎಲ್. ಇ. ಸಂಸ್ಥೆಯ ಸಲಹಾ ಸಮಿತಿಯ ಸದಸ್ಯರಾದ ಡಾ. ಸಿ. ಎಸ್. ಹಸಬಿಯವರು ಈ ಸಂದರ್ಭದಲ್ಲಿ ಮಾತನಾಡಿದರು.

ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಶ್ರೀಮತಿ ರಜನಿ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ರಾಜಶೇಖರ ಪ್ರಾರ್ಥಿಸಿದರು. ಪ್ರಾಚಾರ್ಯ ಎಮ್.ಬಿ.ಕೊಳವಿ ಸ್ವಾಗತಿಸಿದರು. ಡಾ.ಎ.ವಿ.ದೇವಾಂಗಮಠ  ಪರಿಚಯಿಸಿದರು. ಭಾಷಾ ನದಾಫ ವಂದಿಸಿದರು. ಪ್ರೊ.ವೀಣಾ.ಆರ್.ತಿರ್ಲಾಪೂರ ನಿರೂಪಿಸಿದರು.

# ಮಧುಮೇಹ ಮಕ್ಕಳಿಗಾಗಿ ವಾರ್ಷಿಕ ಬೇಸಿಗೆ ಶಿಬಿರ




ಶಿಬಿರಾರ್ಥಿಗಳೊಂದಿಗೆ ಡಾ. ವ್ಹಿ. ಡಿ. ಪಾಟೀಲ, ಡಾ. ಎಂ. ವ್ಹಿ. ಜಾಲಿ, ಡಾ. ಆರ್. ಎಸ್. ಮುಧೋಳ

ಯಾವುದೇ ಕಾರಣಕ್ಕೂ ನನಗೆ ಅನಾರೋಗ್ಯ ಕಾಡುತ್ತಿದೆ ಎಂದು ಎದೆಗುಂದದೆ ಅದನ್ನೇ ಸವಾಲಾಗಿ ಸ್ವೀಕರಿಸಿ, ಜೀವನದಲ್ಲಿ ಸಾಧನೆ ಮಾಡಬೇಕು. ಜೀವನದಲ್ಲಿ ನಡೆಯುವ ಚಿಕ್ಕ ಪುಟ್ಟ ಘಟನೆಗಳನ್ನೇ ಮೆಟ್ಟಿಲುಗಳನ್ನಾಗಿ ಪರಿವರ್ತಿಸಿಕೊಂಡು ಮುನ್ನುಗ್ಗಬೇಕೆಂದು ಕಥೆಗಾರ್ತಿ ಹಾಗೂ ಸಮಾಜ ಸೇವಕಿ ಮೋನಿಕಾ ಕಕ್ಕರ ಕರೆ ನೀಡಿದರು.

ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ಮಧುಮೇಹ ಕೇಂದ್ರವು ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ೧೫ ಮೇ ೨೦೧೯ರಂದು ಮಧುಮೇಹದಿಂದ ಬಳಲುತ್ತಿರುವ ಮಕ್ಕಳಿಗಾಗಿ ಏರ್ಪಡಿಸಲಾಗಿದ್ದ ೧೯ ನೇ ವಾರ್ಷಿಕ ಉಚಿತ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಯಶಸ್ಸುಗಳೇ ಜೀವನವನ್ನು ಧನಾತ್ಮಕ ಭಾವನೆಗಳಿಗೆ ಕರೆದುಕೊಂಡು ಹೋಗುತ್ತವೆ. ಸೋತಾಗ ಕುಗ್ಗದೇ ಮತ್ತೆ ಪುಟಿದೇಳಬೇಕು ಎಂದು ಕರೆ ನೀಡಿದರು.

ಸಮಾಜ ಸೇವಕಿ ವೃಂದಾ ಕಲ್ಯಾಡ ಅವರು ಮಾತನಾಡಿ, ತಾಯಿಯು ಕೇವಲ ಗುರುವಾಗಿಲ್ಲ. ಮಕ್ಕಳನ್ನು ಸಕಲ ದೃಷ್ಟಿಯಿಂದ ಪೋಷಿಸಿ ತಿದ್ದಿ ತೀಡಿ ಅವರಿಗೆ ಒಂದು ರೂಪ ನೀಡುವಲ್ಲಿ, ಗುರುವಾಗಿ, ಗೆಳತಿಯಾಗಿ, ಸಹೋದರಿಯಾಗಿ ಎಲ್ಲದರಲ್ಲಿ ಅವಳ ಶ್ರಮ ಅತ್ಯಧಿಕವಾಗಿದೆ. ಕೇವಲ ದುಡ್ಡಿನಿಂದ ಸಮಾಜ ಸೇವೆಯನ್ನು ಮಾಡಲು ಸಾಧ್ಯವಿಲ್ಲ. ಕೌಶಲ್ಯಾಧಾರಿತ ಶಿಕ್ಷಣ, ಜೀವನ ಶೈಲಿ, ಆರೋಗ್ಯಯುತ ಜೀವನ ಕಲ್ಪಿಸುವಲ್ಲಿ ಸಹಾಯ ಮಾಡಬೇಕೆಂದು ಅವರು, ಡಾ. ಜಾಲಿ ದಂಪತಿಗಳ ಕಾರ್ಯ ಶ್ಲಾಘನೀಯ ಎಂದರು.

ಕಾಹೇರನ ಕುಲಸಚಿವರಾದ ಡಾ. ಎ. ಡಿ. ಪಾಟೀಲ,  ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರು ಮತ್ತು ಮಧುಮೇಹ ತಜ್ಞವೈದ್ಯರಾದ ಡಾ. ಎಂ. ಎ. ಜಾಲಿ ಮಾತನಾಡಿದರು. ಶಿಬಿರದಲ್ಲಿ ಸುಮಾರು ೧೧೦ ಕ್ಕೂ ಅಧಿಕ ಮಕ್ಕಳು ಪಾಲ್ಗೊಂಡಿದ್ದರು. ಡಾ. ಆರ್. ಎಸ್. ಮುಧೋಳ, ಡಾ. ಜ್ಯೋತಿ ವಾಸೇದಾರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ಡಾ. ನಂದಿತಾ ಪವಾರ ನಿರೂಪಿಸಿದರು ಡಾ. ಸಂಜಯ ಕಂಬಾರ ವಂದಿಸಿದರು.

# ಯುಎಸ್‌ಎಂ ಕೆಎಲ್‌ಇ ಮೆಡಿಕಲ್ ಪ್ರೋಗ್ರಾಂ ವೈದ್ಯ ವಿದ್ಯಾರ್ಥಿಗಳಿಗೆ ಪ್ರಥಮ ಚಿಕಿತ್ಸಾ ತರಬೇತಿ ಕಾರ್ಯಕ್ರಮ



ಅವಘಡಗಳಿಗೆ ಎಡೆಮಾಡಿಕೊಡದೇ ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸುವದು ಅತ್ಯಗತ್ಯವಾಗಿದೆ ಎಂದು ಯುಎಸ್‌ಎಮ್ ಕೆಎಲ್‌ಇಯ ನಿರ್ದೇಶಕ ಡಾ. ಹೆಚ್. ಬಿ. ರಾಜಶೇಖರ ಹೇಳಿದರು. ಅವರು ೧೪. ೬. ೨೦೧೯ ರಂದು ಬೆಳಗಾವಿಯ ಕೆಎಲ್‌ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆಯಲ್ಲಿ ಜರುಗಿದ ೪ನೇ ಪ್ರಥಮ ಚಿಕಿತ್ಸಾ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪ್ರಥಮ ಚಿಕಿತ್ಸೆಯ ಜ್ಞಾನದ ಅಭಾವದಿಂದ ಎಷ್ಟೋ ಜನರು ಅಸು ನೀಗುತ್ತಿರುವದು ಖೇದಕರವೆನ್ನಿಸುತ್ತದೆ. ಆದ್ದರಿಂದ ವೈದ್ಯ ವೃತ್ತಿಯಲ್ಲಿರುವ ನಾವು ಇದನ್ನು ಅರ್ಥೈಸಿಕೊಂಡು ಮತ್ತೊಬ್ಬರಿಗೆ ತಿಳಿಸಬೇಕೆಂದು ಕರೆ ನೀಡಿದರು. ಅತಿಥಿಯಾಗಿ ಭಾರತೀಯ ಕೇಂದ್ರ ಚಿಕ್ಕಮಕ್ಕಳ ವಿಭಾಗದ ಸಂಘಟನೆಯ ಸದಸ್ಯ ಡಾ. ಪಠೆಪುರ ಆಗಮಿಸಿದ್ದರು. ಆಸ್ಪತ್ರೆಯ ನಿರ್ದೇಶಕ ಡಾ. ಎಸ್. ಸಿ. ಧಾರವಾಡ ಅಧ್ಯಕ್ಷತೆ ವಹಿಸಿದ್ದರು. ಡಾ. ಸೌಮ್ಯಾ ವೇರ್ಣೆಕರ ನಿರೂಪಿಸಿ ವಂದಿಸಿದರು. ಸುಮಾರು ೬೦ಕ್ಕೂ ಅಧಿಕ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

## ವಿಶ್ವ ರಕ್ತದಾನಿಗಳ ದಿನಾಚರಣೆ



ದಾನಗಳಲ್ಲಿ ಶ್ರೇಷ್ಠದಾನ ರಕ್ತದಾನ, ರಕ್ತವು ನಮ್ಮ ಶರೀರದ ಅವಿಭಾಜ್ಯ ಅಂಗವಾಗಿದ್ದು ರಕ್ತಕ್ಕೆ ಪರ್ಯಾಯವಾದುದು ಬೇರೊಂದಿಲ್ಲ ಎಂದು ಯುಎಸ್‌ಎಮ್ ಕೆಎಲ್‌ಇ ಯ ನಿರ್ದೇಶಕ ಡಾ. ಹೆಚ್. ಬಿ. ರಾಜಶೇಖರ ಮಾತನಾಡಿದರು. ಅವರು ೧೪. ೬. ೨೦೧೯ ರಂದು ಕೆಎಲ್‌ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆಯ ರಕ್ತ ಭಂಡಾರದಲ್ಲಿ ವಿಶ್ವ ರಕ್ತದಾನ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ವೈದ್ಯ ವಿಜ್ಞಾನವು ನಮ್ಮ ಶರೀರದಲ್ಲಿರುವ ಯಾವುದೇ ಅಂಗವನ್ನು ಕೃತಕವಾಗಿ ಅಥವಾ ಕಸಿ ವಿಧಾನದಿಂದ ಮರುಜೋಡಿಸಬಹುದಾಗಿದೆ ಆದರೆ ರಕ್ತವು ಒಂದು ವಿಶಿಷ್ಟಗುಣವನ್ನು ಹೊಂದಿದ್ದು ಇದನ್ನು ಯಾವುದೇ ರೀತಿಯ ವಿಧಾನಗಳಿಂದ ತಯಾರಿಸಲು ಸಾಧ್ಯವಿಲ್ಲ ಆದ್ದರಿಂದ ಸಶಕ್ತ ಹೆಣ್ಣು ಗಂಡು ಎಂಬ ಭೇದವಿಲ್ಲದೆ ಎಲ್ಲರೂ ರಕ್ತದಾನ ಮಾಡಿ ಇನ್ನೊಂದು ಜೀವ ಉಳಿಸಲು ಕಾರಣಕರ್ತರಾಗಿ ಎಂದು ಕರೆ ನೀಡಿದರು. ಅಧ್ಯಕ್ಷತೆಯನ್ನು ಆಸ್ಪತ್ರೆಯ ನಿರ್ದೇಶಕ ಡಾ. ಎಸ್. ಸಿ. ಧಾರವಾಡ ವಹಿಸಿದ್ದರು. ಹಿರಿಯ ವೈದ್ಯ ಡಾ. ಬಿ ಎಸ್ ಮಹಾಂತಶೆಟ್ಟಿ, ಹಿರಿಯ ಶಸ್ತ್ರಚಿಕಿತ್ಸಜ್ಞ ಡಾ ಅಶೋಕ ಪಾಂಗಿ, ಡಾ. ಅಶೋಕ ಅಲತಗಿ, ರಕ್ತ ಭಂಡಾರ ಅಧಿಕಾರಿ ಡಾ. ವಸಂತ ಶಿಂಧೆ ಉಪಸ್ಥಿತರಿದ್ದರು.

## ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ



ದೀಪವು ಉರಿಯೋದಿಲ್ಲ ಅದು ಬೆಳಗುತ್ತದೆ. ಮನುಷ್ಯ ಕೂಡಾ ಉರಿಯದೇ ಬೆಳಗಬೇಕು ಮತ್ತೊಬ್ಬರ ಜೀವನಕ್ಕೆ ಬೆಳಗಾಗಬೇಕು ಎಂದು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಹರ್ಷವರ್ಧನ ಶೀಲವಂತ ಅವರು ಧಾರವಾಡದ ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ವಾರ್ಷಿಕ ಕ್ರೀಡಾ ಹಾಗೂ ಸಾಂಸ್ಕೃತಿಕ ಸಂಘಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಇನ್ನೋರ್ವ ಅತಿಥಿಗಳಾದ ಪ್ರೊ.ಬಿ.ಬಿ.ಮಾಶಾಳ ಅವರು ದುಶ್ಚಟಗಳಿಗೆ ಬಲಿಯಾಗದೇ ಆರೋಗ್ಯದತ್ತ ಗಮನ ನೀಡಿ ಜೀವನದಲ್ಲಿ ಸಾಧನೆಯತ್ತ ಚಿತ್ತ ಹರಿಸಬೇಕು ಎಂದರು. ಇದೇ ಸಂದರ್ಭದಲ್ಲಿ ಗಣ್ಯರಾದ ಡಾ.ಡಿ.ಎಮ್.ಹಿರೇಮಠ, ಡಾ.ಕಸ್ತೂರಿ ಬಿಕ್ಕಣ್ಣವರ, ಬಿ. ಬಿ. ಮಾಶಾಳ, ಪ್ರೊ. ಸಿ. ಎಮ್. ಕೊಟ್ಟುರಶೆಟ್ಟರ, ಶ್ರೀಕಾಂತ ಮಾನೆ ಅವರನ್ನು ಸನ್ಮಾನಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ಹಿ. ಪ್ಹಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ವಾರ್ಷಿಕ ವರದಿಯನ್ನು ಡಾ.ಎಂ.ಟಿ. ಅನುರಾಧಾ ಹಾಗೂ ಕ್ರೀಡಾ ವರದಿಯನ್ನು ಡಾ. ಕೆ. ಎಫ್. ಪವಾರ ವಾಚಿಸಿದರು. ಡಾ. ಎಂ.ಟಿ.ಅನುರಾಧಾ ಸ್ವಾಗತಿಸಿದರು. ಪ್ರೊ. ಎಸ್. ಎಸ್.ಸಂಗೊಳ್ಳಿಯವರು ಪರಿಚಯಿಸಿದರು. ಪ್ರೊ. ಬಿ. ಎ. ಬೆಣ್ಣೆ ಮತ್ತು ಪ್ರೊ.ಶಶಾಂಕ ಹಾದಿಮನಿ ನಿರೂಪಿಸಿದರು.

□□

## ಬಿ. ಎಸ್. ಹಂಚಿನಾಳ ಕನ್ನಡ ಪ್ರಾಥಮಿಕ ಶಾಲೆ, ಬೆಳಗಾವಿ



ಬೆಳಗಾವಿಯ ಬಿ. ಎಸ್. ಹಂಚಿನಾಳ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಉಚಿತ ಪಠ್ಯಪುಸ್ತಕಗಳನ್ನು ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಶ್ರೀಮತಿ ರತ್ನಪ್ರಭಾ ಬೆಲ್ಲದ ಅವರು ವಿತರಿಸಿದರು. ಪ್ರಧಾನ ಗುರುಗಳಾದ ಬಿ. ಕೆ. ಗುರುಮತ್ರನವರ, ರಾಜಶ್ರೀ ಸ್ವಾಮಿ, ಯು. ಬಿ. ದೇಸಾಯಿ, ಪ್ಹಿ. ಸಿ. ಗುರನಗೌಡರ, ಶ್ರೀದೇವಿ ಪಾಟೀಲ ಹಾಗೂ ಉಮಾ ಕರ್ಕಿ ಉಪಸ್ಥಿತರಿದ್ದರು.

□□

# ಅಭಿಯಾಂತ್ರಿಕ ಹಾಗೂ ತಾಂತ್ರಿಕ ಕಾಲೇಜು, ಚಿಕ್ಕೋಡಿ



ಚಿಕ್ಕೋಡಿಯ ಕೆ. ಎಲ್. ಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ೨೦೧೮-೧೯ ಶೈಕ್ಷಣಿಕ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ಏರ್ಪಡಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಅಂತಾರಾಷ್ಟ್ರೀಯ ವ್ಹೀಲ್ ಚೇರ ಕ್ರಿಕೆಟ್ ಆಟಗಾರ ಸುನೀಲಕುಮಾರ ಪಾಟೀಲ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ನಮ್ಮ ದೇಶದಲ್ಲಿ ಒಲಿಂಪಿಕಗಿಂತ ಹೆಚ್ಚು ಪದಕಗಳನ್ನು ಅಂಗವಿಕಲರು ಪ್ಯಾರಾ ಒಲಿಂಪಿಕನಲ್ಲಿ ಪಡೆದುಕೊಂಡಿರುವುದು ಶ್ಲಾಘನೀಯ. ಉತ್ತರ ಕರ್ನಾಟಕದವರಿಗೆ ಕ್ರೀಡೆಯಲ್ಲಿ ಕಡಿಮೆ ಅವಕಾಶಗಳು ದೊರೆಯುತ್ತಿವೆ. ಹೀಗಾಗಿ ರಾಷ್ಟ್ರಮಟ್ಟದಲ್ಲಿ ನಮ್ಮವರು ಹಿಂದುಳಿದಿದ್ದಾರೆ. ಸಾಧನೆ ಮಾಡದೇ ಹೋದರೆ ಜೀವನದಲ್ಲಿ ಸಂತೋಷವಿರುವುದಿಲ್ಲ. ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ಶರೀರ ಸದೃಢವಾಗಿ ಜೀವನದಲ್ಲಿ ಶಿಸ್ತು ಬೆಳೆಯುತ್ತದೆ ಎಂದರು. ಪ್ರಾಚಾರ್ಯರಾದ ಡಾ. ಪ್ರಸಾದ ರಾಂಪೂರೆ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಗಜಾನನ ದೇಸ್ತೋಟ ಸ್ವಾಗತಿಸಿದರು. ಪೂನ್ಮಚರಣ ನಿರೂಪಿಸಿದರು. ಅಪೂರ್ವಾ ಕಲಾಲ ವಂದಿಸಿದರು. ಪ್ರೊ. ಗಜಾನನ್ ದೇಸ್ತೋಟ್ ಮತ್ತು ದೈಹಿಕ ಶಿಕ್ಷಕರಾದ ಸಂಜೀವ ದರೂರ ಸಂಯೋಜಿಸಿದರು.

□□

# ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ




ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯುವ ಮೂಲಕ ಸಂಸ್ಥೆಗೆ ಮತ್ತು ಪಾಲಕರಿಗೆ ಕೀರ್ತಿ ತರಬೇಕು ಎಂದು ಪ್ರಾಚಾರ್ಯ ಡಾ.ಎಲ್.ಡಿ. ಹೊರಕೇರಿ ಹೇಳಿದರು. ಕೆ.ಎಲ್.ಇ ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯ ಬಿ.ಎ. ಮತ್ತು ಬಿ.ಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಮಹತ್ತರ ಜವಾಬ್ದಾರಿಯನ್ನು ಹೊಂದಿದ್ದು, ಈ ನಿಟ್ಟಿನಲ್ಲಿ ಸತತ ಅಭ್ಯಾಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಡಾ.ಸಿ.ಎಸ್. ಹಿರೇಮಠ, ಪ್ರೊ.ಎಸ್.ಎನ್. ಎಮ್ಮಿ, ಪ್ರೊ.ಸುಜಾತಾ ಪಟ್ಟೇದ, ಡಾ.ವಾಯ್.ಎನ್. ನಾಗೇಶ, ಪ್ರೊ.ನಿರ್ಮಲಾ ಎ. ಅಣ್ಣಿಗೇರಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಪ್ರೊ.ಸೌಮ್ಯ ದೇಶಪಾಂಡೆ ಪ್ರಾರ್ಥಿಸಿದರು. ಪ್ರೊ.ವಸಂತಾ ಬಿ. ಕಲ್ಯಾಣಿ ಸ್ವಾಗತಿಸಿದರು. ಡಾ.ಆರ್.ಆಯ್. ಹರಕುಣಿ ನಿರೂಪಿಸಿದರು. ಡಾ.ವಾಯ್.ಎನ್. ನಾಗೇಶ ವಂದಿಸಿದರು.

□□

# ಕೆಎಲ್‌ಇ ಡಾ. ಪ್ರಭಾಕರ ಕೋರೆ ಆಸ್ಪತ್ರೆ ವೈದ್ಯರಿಂದ ಸಾಧನೆ



ಹೃದಯದ ವಾಲ್ವಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಮರುಜೋಡಿಸುವಲ್ಲಿ ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದ ಹೃದಯ ಶಸ್ತ್ರಚಿಕಿತ್ಸಾ ವೈದ್ಯರು ಯಶಸ್ವಿಯಾಗಿದ್ದಾರೆ.

ಕಳೆದ ಎರಡು ವರ್ಷಗಳಿಂದ ತೀವ್ರತರವಾದ ಎದೆಬಿಗಿತ, ಉಸಿರಾಟದ ತೊಂದರೆ, ಆಯಾಸ, ನೆಗಡಿ ಮತ್ತು ಜ್ವರದಿಂದ ಬಳಲುತ್ತ ತೀವ್ರ ಆರೋಗ್ಯದ ಸಮಸ್ಯೆ ಎದುರುಸುತ್ತಿದ್ದ ೧೦ ವರ್ಷದ ಬಾಲಕನಿಗೆ ಪರೀಕ್ಷಿಸಲಾಗಿ, ಹೃದಯದಲ್ಲಿ ತೊಂದರೆಯಿದ್ದು, ಅರೋಟಿಕ್ ವಾಲ್ವನಲ್ಲಿ ಸೋರಿಕೆಯಾಗುತ್ತ ಹೃದಯವು ದೊಡ್ಡದಾಗಿ ಬೆಳೆಯುತ್ತಿರುವದು ಮತ್ತು ಹಾಳಾಗಿದ್ದು ಕಂಡು ಬಂದಿತು. ಬಾಲಕನ ಹೃದಯ ಶಸ್ತ್ರಚಿಕಿತ್ಸೆ ಅತ್ಯವಶ್ಯವಾಗಿತ್ತು.

ಹಾಳಾದ ಅರೋಟಿಕ್ ವಾಲ್ವ್ ಅನ್ನು ತೆಗೆದುಹಾಕಿ ಅದೇ ಸ್ಥಳದಲ್ಲಿ ಪಲ್ಮನರಿ ವಾಲ್ವ್ ಅನ್ನು ಮರುಜೋಡಿಸಿದರೆ, ಪಲ್ಮನರಿ ವಾಲ್ವ್ ಅನ್ನು ಜೈವಿಕ ವಿಧಾನವಾದ ಡೆಕ್ರಾನ್ ಗ್ರಾಫ್ಟ ಮೂಲಕ ಅಲ್ಲಿಯೇ ನಿಯೋ ಪಲ್ಮನರಿ ವಾಲ್ವ್ ತಯಾರಿಸಿ ಕಸಿ ಮಾಡಲಾಯಿತು. ಈ ಅತ್ಯಾಧುನಿಕ ವಿಧಾನದಿಂದ ಬಾಲಕ ಬೆಳೆದಂತೆ ವಾಲ್ವ್ ಕೂಡ ಅಭಿವೃದ್ಧಿ ಹೊಂದಿತು. ಇದರಿಂದ ಬಾಲಕ ಸಹಜ ಜೀವನ ನಡೆಸಲು ಸಹಕಾರಿಯಾಯಿತು.

ಈ ರೀತಿಯ ಶಸ್ತ್ರಚಿಕಿತ್ಸೆಯನ್ನು ಭಾರತದಲ್ಲಿಯೇ ಪ್ರಥಮ ಬಾರಿಗೆ ನೇರವೇರಿಸಲಾಗಿದೆ. ಶಸ್ತ್ರಚಿಕಿತ್ಸೆ ನೆರವೇರಿಸಿದ ಡಾ. ಪ್ರವೀಣ ತಂಬ್ರಳ್ಳಿಮಠ ಅವರಿಗೆ ಡಾ. ನಿಕುಂಜ ವ್ಯಾಸ್, ಅರವಳಿಕೆ ತಜ್ಞರಾದ ಡಾ. ಶರಣಗೌಡಾ ಪಾಟೀಲ, ಡಾ. ಅಭಿಜಿತ ಶಿತೋಳೆ ಸಹಕಾರ ನೀಡಿದರೆ, ಶಸ್ತ್ರಚಿಕಿತ್ಸೆಯ ನಂತರ ಡಾ. ವಿರೇಶ ಮಾನ್ವಿ ಹಾಗೂ ಡಾ. ನಿಧಿ ಮಾನ್ವಿ ಗೋಯಲ್ ಚಿಕಿತ್ಸೆ ನೀಡಿದರು.  ಬಾಲಕ ಈಗ ಗುಣಮುಖ ಹೊಂದಿ ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದಾನೆ. ಶಸ್ತ್ರಚಿಕಿತ್ಸೆ ನೆರವೇರಿಸಿದ ವೈದ್ಯರ ತಂಡವನ್ನು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ ಕೋರೆ, ವೈದ್ಯಕೀಯ ನಿರ್ದೇಶಕರಾದ ಡಾ. ಎಂ. ವಿ. ಜಾಲಿ ಹಾಗೂ ಸಿಬ್ಬಂದಿಗಳು ಅಭಿನಂದಿಸಿದ್ದಾರೆ. ಬಾಲಕನ ಶಸ್ತ್ರಚಿಕಿತ್ಸೆಯನ್ನು ನೌಕರರ ವಿಮಾ ಯೋಜನೆಯಡಿ ಸಂಪೂರ್ಣವಾಗಿ ಉಚಿತ ಶಸ್ತ್ರಚಿಕಿತ್ಸೆಯನ್ನು ನೆರವೇರಿಸಲಾಗಿದೆ.

# ಕೆಎಲ್‌ಇಎಸ್ ರೋಟರಿ ಸ್ಕಿನ್ ಬ್ಯಾಂಕ್‌ಗೆ ಚರ್ಮದಾನ



ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ಕೆಎಲ್‌ಇಎಸ್ ರೋಟರಿ ಸ್ಕಿನ್ (ಚರ್ಮ ಭಂಡಾರ) ಬ್ಯಾಂಕ್‌ಗೆ ಚರ್ಮವನ್ನು ದಾನ ಮಾಡುವದರ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದು, ಸುಟ್ಟ ಗಾಯಗಳಿಂದ ಬಳಲುತ್ತ ಜೀವನ್ಮರಣದ ನಡುವೆ ಹೋರಾಡುವ ರೋಗಿಗಳಿಗೆ ಆಸರೆಯಾಗಿದ್ದಾರೆ.

ಮುಂಬೈನ ಫೆಡರೇಶನ್ ಆಫ್ ಆರ್ಗನ್ ಆ್ಯಂಡ ಬಾಡಿ ಡೊನೇಶನ್‌ನ ಪದಾಧಿಕಾರಿ ಪುರುಷೋತ್ತಮ ಪವಾರ ಅವರು ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ಪ್ಲಾಸ್ಟಿಕ್ ಸರ್ಜನ ಹಾಗೂ ಸ್ಕಿನ್ ಬ್ಯಾಂಕಿನ ನಿರ್ದೇಶಕರಾದ ಡಾ. ರಾಜೇಶ ಪವಾರ ಅವರನ್ನು ಸಂಪರ್ಕಿಸಿ, ಮಂದಾಕಿನಿ ಸುರೇಶ ಭುಮಕರ ಅವರು ನಿಧನರಾಗಿದ್ದು, ಅವರ ಕುಟುಂಬ ಸದಸ್ಯರು ಚರ್ಮದಾನ ಮಾಡಲು ಉತ್ಸುಕರಾಗಿದ್ದಾರೆ, ಆದ್ದರಿಂದ ತಾವು ದಯವಿಟ್ಟು ಮುಂದಿನ ಕಾರ್ಯಕ್ಕೆ ಅಣಿಯಾಗಿ ಎಂದು ಮಾಹಿತಿ ನೀಡಿದರು. ತಕ್ಷಣವೇ ಕಾರ್ಯಪ್ರವರ್ತರಾದ ಡಾ. ರಾಜೇಶ ಅವರು, ಡಾ. ಸಾಗರ ಕಾಟ್ಕರ, ಡಾ. ದೀಪಕ ಕೆ., ಹಾಗೂ ಸದಾನಂದ ಭಜಂತ್ರಿ ಅವರನ್ನು ಕೊಲ್ಹಾಪೂರಕ್ಕೆ ಕಳುಹಿಸಿಕೊಟ್ಟು, ಕೇವಲ ೩ ಗಂಟೆಯಲ್ಲಿ ಮೃತದೇಹದ ಚರ್ಮವನ್ನು ತೆಗೆದುಕೊಂಡು ಬಂದರು. ಚರ್ಮ ದಾನ ಮಾಡಿದ ಕುಟುಂಬದ ಸದಸ್ಯರನ್ನು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ. ಎಂ. ವಿ. ಜಾಲಿ, ಕ್ಲಿನಿಕಲ್ ಸೇವೆಗಳ ನಿರ್ದೇಶಕರಾದ ಡಾ. ಆರ್. ಬಿ. ನೇರ್ಲಿ ಹಾಗೂ ಆಡಳಿತ ಮಂಡಳಿ ಸದಸ್ಯರು ಅವರ ಯುವಕನ ಕುಟುಂಬದ ಸದಸ್ಯರ ಹೃದಯ ಸ್ಪರ್ಶಿ ಮಾನವೀಯತೆ ಕಾರ್ಯವನ್ನು ಅವರು ಸಂತೋಷ ಮಾದರ ಅವರ ಕುಟುಂಬಸ್ಥರ ಕಾರ್ಯವನ್ನು ಶ್ಲಾಘಿಸಿದ್ದಾರೆ.

# ಪದವಿಪೂರ್ವ ಮಹಾವಿದ್ಯಾಲಯ, ಕುಕನೂರ



ಕುಕನೂರಿನ ಕೆ.ಎಲ್.ಇ.ಪ.ಪೂ. ಮಹಾವಿದ್ಯಾಲಯದಲ್ಲಿ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಬೆಂಗಳೂರು ಇವರ ವತಿಯಿಂದ ವಿದ್ಯಾರ್ಥಿಗಳಿಗಾಗಿ ಒಂದು ದಿನದ ವಿಶೇಷ ಕಾರ್ಯಾಗಾರ ನಡೆಸಲಾಯಿತು. ಅಜೀಮ್ ಪ್ರೇಮ್‌ಜಿ ಫೌಂಡೇಶನ್ ವಿಭಾಗದ ಮಾರ್ಗದರ್ಶನ ತಂಡದ ಮುಖ್ಯಸ್ಥರಾದ ಶ್ರೀ ರಾಜಗೋಪಾಲ ಹಾಗೂ ಅವರ ಐದು ಜನ ಸದಸ್ಯರ ತಂಡವು ಇದರಲ್ಲಿ ಭಾಗವಹಿಸಿತ್ತು.

ಫೌಂಡೇಶನ್ ಮುಖ್ಯಸ್ಥರಾದ ರಾಜಗೋಪಾಲ ಮಾತನಾಡುತ್ತಾ ಇಂದಿನ ಸ್ಪರ್ಧಾತ್ಮಕ ಶೈಕ್ಷಣಿಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಹಂತದಲ್ಲೂ ವಿದ್ಯಾರ್ಥಿಗಳು ಸಾಮಾಜಿಕ ಹೊಣೆಗಾರಿಕೆ ಬದ್ಧತೆ, ಜ್ಞಾನ ಕ್ರಿಯಾಶೀಲತೆಯ ಜೊತೆಗೆ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಇದನ್ನು ಪ್ರತಿ ಹಂತದಲ್ಲೂ ಗಮನಿಸಬೇಕು ಎಂದು ಹೇಳಿದರು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಸ್.ಸಿ. ಪಾಟೀಲರವರು ಅಧ್ಯಕ್ಷತೆ ವಹಿಸಿದ್ದರು. ಪರಶುರಾಮ ಕಟವಿ ಕಾರ್ಯಕ್ರಮ ನಿರ್ವಹಿಸಿದರು. ಎಸ್.ಎಸ್. ರಾಜೂರ ವಂದಿಸಿದರು.

# ಎಸ್. ಎ. ಮಾನ್ವಿ ಕಾನೂನು ಮಹಾವಿದ್ಯಾಲಯ, ಗದಗ



ವಾರ್ಷಿಕ ಸಂಚಿಕೆ 'ಹೊನಲು' ಬಿಡುಗಡೆ ಮಾಡುತ್ತಿರುವ ಪೂಜ್ಯರು ಹಾಗೂ ಗಣ್ಯರು.

ಗದುಗಿನ ಕೆ.ಎಲ್.ಇ. ಸಂಸ್ಥೆಯ ಎಸ್. ಎ. ಮಾನ್ವಿ ಕಾನೂನು ಮಹಾವಿದ್ಯಾಲಯದಲ್ಲಿ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ವಾರ್ಷಿಕ ಸಂಚಿಕೆ 'ಹೊನಲು' ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಬದಾಮಿ ನರಸಾಪುರ ಹಿರೇಮಠದ ಶ್ರೀ ಶ್ರೀ ಶ್ರೀ ಮರುಳಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ವಹಿಸಿದ್ದರು. ಅವರು ಆಶೀರ್ವಚನ ನೀಡುತ್ತಾ, "ಹೇಳುವುದಕ್ಕಿಂತ ಹೇಳಿದಂತೆ ನಡೆದುಕೊಳ್ಳುವುದೇ ಉತ್ತಮ ಮಾರ್ಗ. ಸತ್ಯವೆಂಬುದು ತ್ರಿಕಾಲ ಅಬಾಧಿತ. ಇಂದಿನ ದಿನದಲ್ಲಿ 'ಕಾನೂನು ದೇವೋಭವ' ಎಂಬುದು ಹೆಚ್ಚು ಪ್ರಸ್ತುತವಾಗಿದೆ. ಕೆ. ಎಲ್. ಇ. ಸಂಸ್ಥೆಯ ಹಾಗೂ ಅದರ ಮಹಾವಿದ್ಯಾಲಯಗಳಲ್ಲಿ ಶಿಸ್ತು ಹಾಗೂ ಸಾಧನೆ ಹೆಚ್ಚಿನ ಮಹತ್ವ ಹೊಂದಿವೆ" ಎಂದರು.

ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ್ದ ಗದುಗಿನ ಮುಖ್ಯ ದಿವಾಣಿ ನ್ಯಾಯಾಧೀಶರು (ಹಿರಿಯ ವಿಭಾಗ) ಹಾಗೂ ಸದಸ್ಯ ಕಾರ್ಯದರ್ಶಿಗಳು ಗದಗ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಇವರು "ಯಶಸ್ಸಿಗೆ ಪರಿಶ್ರಮದ ಹೊರತು ಅನ್ಯ ಮಾರ್ಗವಿಲ್ಲ. ಆರೋಗ್ಯ ಯಶಸ್ಸಿನ ಒಂದು ಅವಶ್ಯಕ ಮೆಟ್ಟಿಲಾಗಿದೆ" ಎಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಮತ್ತೋರ್ವ ಗೌರವಾನ್ವಿತ ಅತಿಥಿಗಳಾಗಿ  ಪ್ರಾಚಾರ್ಯರಾದ ಡಾ. ಎಮ್. ಎಲ್. ಗುಳೇದಗುಡ್ಡ  ಆಗಮಿಸಿದ್ದರು.

ಪ್ರಾಚಾರ್ಯರಾದ ಎಸ್. ಆರ್. ಪಾಟೀಲ ಅಧ್ಯಕ್ಷತೆ ವಹಿಸಿದ್ದರು.  ವೇದಿಕೆಯ ಮೇಲೆ ಮಹಾವಿದ್ಯಾಲಯದ ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರುಗಳಾದ  ಜಿ. ಕೆ. ಕೋಟಿ ಮತ್ತು ಎಸ್. ಎಫ್. ಹಾದಿಮನಿ ಉಪಸ್ಥಿತರಿದ್ದರು. ಶ್ರೀನಿವಾಸ ಸಿ ಪಾಲಕೊಂಡ ಸ್ವಾಗತಿಸಿ ಅತಿಥಿಗಳನ್ನು ಪರಿಚಯಿಸಿದರು. ಸಂಗಮನಾಥ ಟಿ. ಮೂರಶಿಳ್ಳಿನ ವಾರ್ಷಿಕ ವರದಿ ಮಂಡಿಸಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಸಿ. ಬಿ. ರಣಗಟ್ಟಿಮಠ ಪಾರಿತೋಷಕ ವಿತರಣಾ ಕಾರ್ಯಕ್ರಮ ನಡೆಸಿಕೊಟ್ಟರು. ಕು. ಗೀತಾ ವಂದಿಸಿದರು. ಕು. ಭಾಗ್ಯಶ್ರೀ ಪೂಜಾರ ನಿರೂಪಿಸಿದರು.

# ಕೆಎಲ್‌ಇ ಹೋಮಿಯೋಪಥಿ ಕಾಲೇಜು, ಬೆಳಗಾವಿ




ವಿಶ್ವದಲ್ಲಿ ಪ್ರತಿ ನಾಲ್ಕು ಜನರಲ್ಲಿ ಒಬ್ಬರು ತಂಬಾಕು ಸೇವನೆಗೆ ದಾಸರಾಗುತ್ತಿರುವದು ನಿಜಕ್ಕೂ ಆತಂಕಕಾರಿಯಾಗಿದೆ. ತಂಬಾಕು ಸಿಗರೇಟ್, ಗುಟ್ಕಾ ಖೈನಿ, ಮುಂತಾದ ತಂಬಾಕು ಉತ್ಪನ್ನಗಳ ಪಾಕೀಟುಗಳ ಮೇಲೆ ಎಷ್ಟು ಜಾಗೃತಿಯ ಸಂದೇಶಗಳನ್ನು ಪ್ರಕಟಿಸಿದರೂ ಇದರ ಬಗ್ಗೆ ಜನರು ಜಾಗೃತರಾಗದಿರುವದು ನಿಜಕ್ಕೂ ಮೌಢ್ಯವೇ ಸರಿ ಎಂದು ಕೆಎಲ್‌ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆಯ ನಿರ್ದೇಶಕ ಡಾ. ಎಸ್. ಸಿ. ಧಾರವಾಡ ಹೇಳಿದರು. ಅವರು ಕೆಎಲ್‌ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆ, ಕೆಎಲ್‌ಇ ಹೋಮಿಯೋಪಥಿ ವೈದ್ಯಕೀಯ ಕಾಲೇಜು ಹಾಗೂ ಕೆಎಲ್‌ಇ ಸೆಂಟೆನರಿ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸನ ಸಹಯೋಗದಲ್ಲಿ ನಡೆದ "ವಿಶ್ವ ತಂಬಾಕು ವಿರೋಧಿ ದಿನ"ದ ಆಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ತಂಬಾಕು ಇದು ಅಲ್ಪವೇಳೆಗೆ ನಶೆ ನೀಡುವ ಪದಾರ್ಥವಾದರೂ ಇದರಿಂದ ದೈಹಿಕ, ಮಾನಸಿಕ, ಆರ್ಥಿಕ, ಸಾಮಾಜಿಕ, ಕೌಟುಂಬಿಕ ವಿಘಟನೆಗಳು ಸಾಮಾನ್ಯವಾಗಿವೆ ಆದ್ದರಿಂದ ಕಾಲ ಗತಿಸುವ ಮುಂಚೆಯೇ ಜಾಗೃತರಾಗಿ ನೆಮ್ಮದಿಯ ಜೀವನ ನಡೆಸಿರಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅತಿಥಿಯಾಗಿ ಆಗಮಿಸಿದ್ದ ಕೆಎಲ್‌ಇ ಹೋಮಿಯೋಪಥಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಎಮ್. ಎ. ಉಡಚನಕರ ಮಾತನಾಡುತ್ತ ಇಂದು ಯುವಜನರು ಫ್ಯಾಶನ್, ಗೀಳು, ಎಂಬ ಗೊಂದಲಕ್ಕೆ ಸಿಲುಕಿ ತಂಬಾಕಿನ ಆಕರ್ಷಣೆಗೊಳಗಾಗುತ್ತಿದ್ದಾರೆ. ಇದು ನಮ್ಮ ದೇಶದ ಯುವ ಜನರನ್ನು ಒಳಗಿಂದಲೇ ನಾಶ ಪಡಿಸುವ ವಿಷವಾಗಿದ್ದು ಅದರ ಬಗ್ಗೆ ಅರಿವು ಅಗತ್ಯವೆಂದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಹಿರಿಯ ಮನೋರೋಗ ತಜ್ಞ ಡಾ. ಆಂಟೋನಿಯೋ ಕರವಾಲ್ಹೊ, ಶ್ವಾಸಕೋಶ ತಜ್ಞ ಡಾ.ಗುರುರಾಜ ಉಡಚನಕರ ಉಸಿರಾಟ, ಶ್ವಾಸಕೋಶದ ಮೇಲೆ ಧೂಮ್ರಪಾನ ಹಾಗೂ ತಂಬಾಕು ಸೇವನೆಯ ಪರಿಣಾಮ ಎಂಬ ವಿಷಯದ ಮೇಲೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ವೈದ್ಯರು, ಕೆಎಲ್‌ಇ ಹೋಮಿಯೋಪಥಿ ವೈದ್ಯಕೀಯ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗ ಹಾಗೂ ಕೆಎಲ್‌ಇ ಸೆಂಟೆನರಿ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸನ ನರ್ಸಿಂಗ ವಿದ್ಯಾರ್ಥಿಗಳು ಹಾಗೂ ಕೆಎಲ್‌ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# KLE SILVER JUBILEE HIGH SCHOOL, BARSI



**ANO Varsha Rasal, H.M. Prashant Kolhe, A.H.M. Jaykumar Kumbare and Cadets**

KLE's Silver Jubilee High School, Barsi's fourteen NCC cadets were selected for Cadet's Welfare Society Scholarship and Chief Minister's Scholarship Solapur. N.C.C. Group Commander Mr. P.K. Thapa recently communicated about this to school. Miss Vaishanavi Gund was selected for Cadet's welfare Society Scholarship of Rs. 6000/- and remaining thirteen cadets were selected for Chief Minister's Scholarship of Rs. 1,500/ each These include Miss Pranoti Awated, Rutuja Awate, Divya Dharurkar, Tanuja Garad, Rutuja Gaikwad, Vaishanavi Jagtap, Preeti Jadhavar,Sonali Kewale, Vaishnavi Mundhe, Vaishnavi Satpute, Pratiksha Sakhare, Sruti Sutar and Sakshi Walwadkar.

These cadets showed performance both in academics as well as in N.C.C. camps sports and co-curricular activities. These cadets were well trained and guided by ANO Mrs. Varsha Rasal. The cadets were given Scholarship cheques at the hand of H.M. Prashant Kolhe, AHM Jaykumar Kumbare, Supervior Anuradha Vishwekar and ANO Varsha Rasal were present on the occasion. All staff members congratulated these cadets on their selection for the scholarship.

# INSTITUTE OF NURSING SCIENCES, HUBBALLI

## *Celebration of "Graduation Day & Annual Day Sparsh 2019"*




KLE Society's Institute of Nursing Sciences, Hubballi celebrated Graduation Ceremony and Annual Day of 12th Batch of Basic B.Sc. Nursing, 7th Batch of Post Basic B.Sc. Nursing & 7th Batch of M.Sc. Nursing on 18th May 2019.

Dr. G B Patil, Registrar (Evaluation), Karnataka State Law University, Hubballi. Inaugurated the function by lighting the lamp. 68 Graduates received their degree certificates. Dr. G B Patil, Registrar (Evaluation), Karnataka State Law University, Hubballi was the Chief Guest. In his chief address, he congratulated the graduates and spoke about the good citizens are good human beings, if you want to choose a career, first be a good human being. He pointed out that, learning is a continuous process by the hard work and dedication of teachers in shaping the graduates as a responsible citizen of the country.

Dr. Ravindra Banakar, Member of Senate, RGUHS Bengaluru was the Guest of Honor. In his speech, As meaning of nurse is expanded by him N-Nurturing, U-Understanding, R-Resilience, S-selflessness & Sacrifice and E- Empathy & Efficiency. He said "Graduation is the time of celebration and marks the end of one phase and beginning of the next phase. He concluded his speech by addressing to the students other than graduate along with your curricular study there is something else which is important, that is extracurricular life, makes use of your extra talent to enjoy the life. Dr. B A Yathi Kumara Swamy Gowda, Principal, Alva's College of Nursing, Moodabidri. Was the Guest of Honor. Dr. B M Patil, Principal, KLE University's College of Pharmacy, Belagavi, presided over the function and in his Presidential address; he congratulated the graduates on their achievements and especially the parents for entering their children to take up a profession their likely.

Dr. Sanjay. M. Peerapur, Principal, KLE Society's Institute of Nursing Sciences, Hubballi welcomed & introduced the dignitaries. Mr. Somshekharayya Kalmath presented the Annual Report. Mrs. Tejswini H, proposed the vote of thanks.

# J. G. COLLEGE OF COMMERCE, HUBBALLI



K.L.E Society's  J G College of Commerce organized a One day NAAC sponsored National Seminar on "Role of Librarians in Quality Enhancement in Higher Education." On 30th April, 2019.

Chief Guest Dr. Y. M. Jayaraj, Vice-Chancellor, Pravara Institute of Medical Sciences, Loni Maharastra highlighted on the library of the 21st century and the role of librarians in the ICT driven world. He stressed on the need for a revolutionary change in the library setup and functioning to make it relevant in the 21st century. He drew our attention to how the ancient libraries have evolved from centers of knowledge into centers of skill, competence and value acquisition.

Dr. V. B. Hiremath, NAAC assessor, in his key note address spoke on the seminar theme – "Role of Librarians in Quality Enhancement in Higher Education." The library and the librarian play a crucial role in any educational institution in motivating the young minds to acquire knowledge. He can turn the library into an activity center by organizing various student centered activities like -  Certificate course, Competitions, Book talk and others.

The seminar began with an invocation song by Miss Nidhi Bijapur, welcome speech by Principal, Dr. D.V.Honagannavar, introduction of the president Shri S. I. Munavalli, Member Board of Management K.L.E Society, Belagavi, Chief Guest Dr. Y. M. Jayaraj, VC, Pravara Institute of Medical Science, Loni, Maharastra and the key note speaker Dr. V. B. Hiremath, NAAC assessor, Bengaluru. Smt. S. S. Patil introduced the Guests. Shri  C. V. Onkari spoke about the theme of the seminar. Professor Amrut Jakalli presented vote of thanks.

# KLE COLLEGE OF LAW, KALAMBOLI, NAVI MUMBAI



KLE Society's KLE College of law Kalamboli have organised the annual day celebration for the academic year 2018-19 "LAW MEHFIL" on the 4th of May 2019 in the college Auditorium.

The event consisted of the blessings from the intellectuals, Prize distribution for the academic Rank holders. Principal Dinkar Gitte in his welcome address welcomed all the dignitaries. Shri Mahantesh Kavatagimath, Chairman Governing Body Committee, KLE College of Law Kalamboli, MLC and Chief Whip Opposition Karnataka, Shri Paresh Thakur, Leader of House Panvel City Municipal Corporation, Dr. Chandra Maurya Principal KLE College of Science and Commerce Kalamboli, Dr. S. N. Shetti Director KLE institutions Mumbai.

Shri Mahantesh Kavatagimath MLC have presided over the function. In his presidential address he highlighted the vision and mission of KLE Society, He also praised the activities that are being carried out by the college. In his speech he mentioned that our KLE College Bengaluru has students from all 30 States of India which is a real symbol of University in diversity of India, Sir also said that the main aim of starting a Law College in Navi Mumbai is to serve the Society with the best of legal persons in future.

Dr. Chandra Maurya expressed his happiness over the enthusiasm of the Law College students and also the research publication of the Commerce Section was unveiled Shri Mahantesh Kavatagimath. The students talent was followed by the singing of songs by the professional singers lead by bollywood fame Shrikant Kulkarni and team it was a mind blowing one and a half hour of musical melody which made the audience mesmerised with the sweet memories of songs from 1960 to 2019. ☐☐

# KLE Society's College of Science & Commerce, Kalamboli

## *International Yoga Day Celebration at KLE College*



On the occasion of 5th International Yoga Day, which is celebrated on 21st June worldwide; KLE Society's College of Science and Commerce, Kalamboli organized a Yoga session in their college premises. The session aimed at creating awareness about mental and physical health amongst students. It was organized in association with BALASAHEB PATIL LOKSEVA PRATISHTHAN.

The event was quite exceptional as it saw participation from many virtuous personalities and not just students. The session began with an inauguration ceremony which was followed by felicitation of Mr. Balasaheb Patil, Chairman of Konkan Mhada, at the hands of Dr. S. N. Shetti; Director of KLE College. The Principal, Dr. Chandra B. Maurya, felicitated Mr. Vikrant Patil; Deputy Mayor, Panvel Muncipal Corporation and Mrs. Pradnya Sahastrabuddhe, Yoga Instructor by Mrs. Monika Mahanwar, Kalamboli Corporator. The Director of KLE College, Dr. Shetti, Principal, Dr. Chandra B. Maurya, Mr.Dinkar Gitte, Principal of Law College, HODs of the respective departments, Coordinators, teaching staff as well as students were full of exuberance and participated. ❑❑

---

# ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ

## ರೋಗ ಮುಕ್ತ ಬದುಕಿಗೆ ಯೋಗ ಸಂಜೀವಿನಿ

ದಿನಾಂಕ ೨೧-೬-೨೦೧೯ರಂದು ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ೫ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವು ಜರುಗಿತು.

ಪ್ರೊ. ವೀಣಾ ತಿರ್ಲಾಪುರ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು ಯೋಗ ಎಂದರೇನು? ಪ್ರಯೋಜನಗಳೇನು? ಎಂಬುದನ್ನು ತಿಳಿಸಿದರು. ಯೋಗೆಂಬುದು "ಯೋಗಃಚಿತ್ತ ವೃತ್ತಿ ನಿರೋಧಃ" ಎಂದರೆ ಚಿತ್ತವೃತ್ತಿಗಳನ್ನು ನಿಗ್ರಹಿಸುವುದು ಹಾಗೂ ಮನಸ್ಸಿನ ಮೇಲೆ ಹಿಡಿತವನ್ನು ಸಾಧಿಸುವುದು ಎಂದರ್ಥ ಎಂದರು. ಭಾರತವು ಜಗತ್ತಿಗೆ ನೀಡಿದ ದೊಡ್ಡ ಕಾಣಿಕೆ ಯೋಗ ಎಂದರೆ ತಪ್ಪಲ್ಲ. ಯೋಗ ಸಂಸ್ಕಾರವನ್ನು ಇಡೀ ಜಗತ್ತಿಗೆ ಪಸರಿಸುವಲ್ಲಿ ಭಾರತ ಪ್ರಮುಖ ಪಾತ್ರ ವಹಿಸಿದೆ ಹಾಗೂ ಪ್ರತಿಯೊಂದು ರೋಗ, ಕಾಯಿಲೆಗಳ ವಿರುದ್ಧ ಸಮರ ಸಾರುವುದಕ್ಕೆ ಯೋಗಾಭ್ಯಾಸ ಅತೀ ಮಹತ್ವದ್ದು ಎಂದು ಹೇಳಿ ನಂತರ ಯೋಗಾಸನಗಳನ್ನು ಮಾಡುವ ಮೂಲಕ ವಿವಿಧ ಯೋಗ ಭಂಗಿಗಳನ್ನು ಮತ್ತು ಅದರ ಮಹತ್ವವನ್ನು ತಿಳಿಸಿಕೊಟ್ಟರು.

ಪ್ರಾಚಾರ್ಯರಾದ ಎಂ. ಬಿ. ಕೊಳವಿಯವರು ಮಾತನಾಡುತ್ತ ಇಂದು ೫ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸುತ್ತಿರುವುದು ಸ್ತುತ್ಯಾರ್ಹವಾದುದು. ಇಂದಿನ ಯಾಂತ್ರಿಕ ಒತ್ತಡದ ಜೀವನ ಶೈಲಿ, ಜಂಕ್ ಆಹಾರ ಸೇವನೆ, ಮಾನಸಿಕ ಕ್ಲೇಶಗಳಿಂದ ಮುಕ್ತರಾಗಿ ದೇಹದಾರ್ಢ್ಯತೆ, ಮಾನಸಿಕ ಸಮತೋಲನ ಹಾಗೂ ಹಸನ್ಮುಖರಾಗಿ ಕ್ರಿಯಾಶೀಲತೆಯನ್ನು ಬೆಳೆಸಿಕೊಳ್ಳಲು ಯೋಗ ಸಾಧನ ಅತ್ಯಂತ ಸಹಕಾರಿಯಾಗಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ "A sound mind in a sound body" ಎಂಬುದನ್ನು ರೂಢಿಸಿಕೊಳ್ಳಲು ನಿರಂತರ ಯೋಗ ಸಾಧನೆ ಏಣಿಯಿದ್ದಂತೆ ಎಂದು ಅಭಿಪ್ರಾಯ ಪಟ್ಟರು. ರೋಗ ಮುಕ್ತ ಬದುಕನ್ನು ನಡೆಸಲು ದೀರ್ಘಾಯುಷಿಗಳಾಗಲು ನಿರಂತರ ಯೋಗಾಭ್ಯಾಸವು ಸಂಜೀವಿನಿಯಾಗಲಿದೆಯೆಂದರು. ಈ ಕಾರ್ಯಕ್ರಮದಲ್ಲಿ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ❑❑

## ನರ್ಸಿಂಗ್ ಮಹಾವಿದ್ಯಾಲಯ, ಬೆಳಗಾವಿ



ಅಂತರಾಷ್ಟ್ರೀಯ ರಕ್ತದಾನ ದಿನಾಚರಣೆ ನಿಮಿತ್ತವಾಗಿ ಕೆಎಲ್‌ಇ ಸಂಸ್ಥೆಯ ನರ್ಸಿಂಗ್ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ಕೆಎಲ್‌ಇ ಡಾ.ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ರಕ್ತಭಂಡಾರದ ಸಹಯೋಗದೊಂದಿಗೆ ರಕ್ತದಾನವನ್ನು ಏರ್ಪಡಿಸಿತ್ತು. ನರ್ಸಿಂಗ್ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಸುಧಾ ರೆಡ್ಡಿಯವರು ರಕ್ತದಾನಕ್ಕೆ ಚಾಲನೆ ನೀಡಿ ರಕ್ತದಾನದ ಮಹತ್ವವನ್ನು ತಿಳಿಸಿದರು. ಈ ಸಂದರ್ಭದಲ್ಲಿ ಎನ್‌ಎಸ್‌ಎಸ್ ಸೇವಕರು ರಕ್ತದಾನವನ್ನು ಮಾಡಿದರು. ಎನ್‌ಎಸ್‌ಎಸ್ ಅಧಿಕಾರಿ ಶಿವರಾಜಕುಮಾರ ದಂಡಗೆ, ರಕ್ತಭಂಡಾರದ ನಿರ್ದೇಶಕರಾದ ಶ್ರೀ ವಿರ್ಗಿ ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. □□

## ಜ್ಞಾನಪೀಠ ಪುರಸ್ಕೃತ ಗಿರೀಶ ಕಾರ್ನಾಡ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಜ್ಞಾನಪೀಠ ಪುರಸ್ಕೃತ, ರಂಗಕಲಾವಿದ, ಖ್ಯಾತ ಚಲನಚಿತ್ರ ನಟ, ನಿರ್ದೇಶಕ, ನಾಟಕಕಾರ ಗಿರೀಶ ಕಾರ್ನಾಡ್ ಅವರು 10.6.2019 ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. ತಲೆದಂಡ, ತುಘಲಕ, ಅಗ್ನಿ ಮತ್ತು ಮಳೆ, ಮಾ ನಿಷಾದ, ಒಡಕಲು ಬಿಂಬ, ಹಯವದನ, ನಾಗಮಂಡಲ, ಯಯಾತಿ, ಹಿಟ್ಟಿನಹುಂಜ ಹೀಗೆ ಹಲವಾರು ನಾಟಕಗಳನ್ನು, ಟಿಪ್ಪುವಿನ ಕನಸುಗಳು, ಬೆಂದ ಕಾಳು ಆನ್ ಟೋಸ್ಟ್ ಎಂಬ ಗ್ರಂಥಗಳನ್ನು ಕನ್ನಡಕ್ಕೆ ನೀಡುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದರು.

1938 ಮೇ 19 ರಂದು ಮಹಾರಾಷ್ಟ್ರದ ಮಾಥೇರಾದಲ್ಲಿ ಜನಿಸಿದ್ದ ಕಾರ್ನಾಡರು ಕರ್ನಾಟಕದ ಶಿರಸಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ತಮ್ಮ ಶಿಕ್ಷಣವನ್ನು ಪೂರೈಸಿಕೊಂಡರು. ತಮ್ಮ ಹೆಚ್ಚಿನ ವ್ಯಾಸಂಗವನ್ನು ಆಕ್ಸ್‌ಫರ್ಡ್ ವಿವಿ ಪಡೆದು ಅಮೇರಿಕಾದ ಷಿಕಾಗೋ ವಿವಿಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ನೀಡಿದರು. ಬುದ್ಧಿಜೀವಿಗಳಾಗಿದ್ದ ಅವರು ಹತ್ತು ಭಾಷೆಗಳ ಮೇಲೆ ಪ್ರಭುತ್ವ ಸಾಧಿಸಿದ್ದರು. 'ಆಡಾಡತಾ ಆಯುಷ್ಯ' ಅವರ ಆತ್ಮಕಥನ. ಭಾರತೀಪುರ, ಟೈಗರ ಜಿಂದಾ ಹೈ, ಸಂತ ಶಿಶುನಾಳ ಷರೀಫ್, ಕಾದಲನ್ ಹೀಗೆ ಹಲವಾರು ಭಾಷೆಗಳಲ್ಲಿ ನಾಯಕ ನಟರಾಗಿ, ಪೋಷಕ ನಟರಾಗಿಯೂ ಗುರುತಿಸಿಕೊಂಡರು. ತಮ್ಮ ವಿಭಿನ್ನ ವ್ಯಕ್ತಿತ್ವದ ಮೂಲಕ ಕನ್ನಡದ ನಾಡು-ನುಡಿ ಸಂಸ್ಕೃತಿಗಳ ಹಿರಿಮೆಯನ್ನು ಹೆಚ್ಚಿಸಿದ್ದ ವಿಚಾರವಾದಿಯನ್ನು ಕನ್ನಡನಾಡು ಕಳೆದುಕೊಂಡಿರುವುದು. ದುಃಖವನ್ನುಂಟು ಮಾಡಿದೆ ಎಂದು ಕೋರೆಯವರು ಕೆಎಲ್‌ಇ ಸಂಸ್ಥೆಯ ಸಮಸ್ತ ಪರಿವಾರದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. □□

# ನೆನಪಿನಂಗಳ



೧೯೩೩ರಲ್ಲಿ ಕೆಎಲ್‌ಇ ಸಂಸ್ಥೆಯ ಪ್ರಥಮ ಪದವಿ ಮಹಾವಿದ್ಯಾಲಯ ಲಿಂಗರಾಜ ಕಾಲೇಜನ್ನು ಉದ್ಘಾಟಿಸಿದ್ದ
ಮುಂಬಯಿ ಗವರ್ನರ್ ಸರ್ ಫೆಡ್ರಿಕ್ ಸೈಕ್ಸ್, ಸರ್ ಸಿದ್ದಪ್ಪ ಕಂಬಳಿ ಹಾಗೂ ಗಣ್ಯರ ಅಪರೂಪದ ಭಾವಚಿತ್ರ



ಬೆಳಗಾವಿಯಲ್ಲಿ ೧೯೪೪ರಲ್ಲಿ ಕೆಎಲ್‌ಇ ಸಂಸ್ಥೆಯ ರಾಜಾಲಖಮಗೌಡ ವಿಜ್ಞಾನ ಮಹಾವಿದ್ಯಾಲಯವನ್ನು ಉದ್ಘಾಟಿಸಿದ್ದ
ನೋಬೆಲ್ ಪುರಸ್ಕೃತ ಡಾ.ಸಿ.ವಿ.ರಾಮನ್ ಅವರೊಂದಿಗೆ ಕೆಎಲ್‌ಇ ಪದಾಧಿಕಾರಿಗಳ ಒಂದು ದೃಶ್ಯ

R.No. KAR BIL / 2001/5206



ಗೌರವಾನ್ವಿತ ಉಪರಾಷ್ಟ್ರಪತಿಗಳೊಂದಿಗೆ ಕೆಎಲ್‌ಇ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರ ಒಂದು ನೋಟ.



ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿಶ್ರಾಂತಿ ಉಪಕುಲಪತಿಗಳನ್ನು ಕೆಎಲ್‌ಇ ಸಂಸ್ಥೆಯಿಂದ
ಅಭಿನಂದಿಸಿ ಸತ್ಕರಿಸುತ್ತಿರುವ ಕೆಎಲ್‌ಇ ಉಪಾಧ್ಯಕ್ಷರಾದ ಎಂ.ಸಿ.ಕೊಳ್ಳಿ,
ನಿರ್ದೇಶಕರಾದ ಮಹಾಂತೇಶ ಕವಟಗಿಮಠ ಹಾಗೂ ಬಸವರಾಜ ತಟವಟಿ.

ಮುದ್ರಣ : ಕೆ.ಎಲ್.ಇ. ಸಂಸ್ಥೆಯ ಹೋಮಿಯೋಪತಿ ಮುದ್ರಣಾಲಯ, ವಿದ್ಯಾನಗರ, ಹುಬ್ಬಳ್ಳಿ, ದೂರವಾಣಿ : [illegible]
Email : kleprasarang10@gmail.com